


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 Issue-09 September 2023 ₹ 10/-


## ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಶುಭಾಶಯಗಳು



ಆಗಸ್ಟ್ 30 ರಂದು ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಬೆಳಗಾವಿಯ ಜೈನ್ ಹೆರಿಟೇಜ್ ಶಾಲೆಯ, ಸ್ಕೌಟ್ ಮಾಸ್ಟರ್ ಶ್ರೀ ಅಕ್ಷಯ ವಾಡೇಕರ್ ಹಾಗೂ ಗೈಡ್ಸ್‌ಗಳು ರಾಷ್ಟ್ರಪತಿ ಭವನ, ನವದೆಹಲಿಯಲ್ಲಿ ಭೇಟಿ ಮಾಡಿ ರಕ್ಷಾಬಂಧನವನ್ನು ಕಟ್ಟಿ ಶುಭಕೋರಿದರು.



ಸೆಪ್ಟೆಂಬರ್ 13 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರಾದ ಶ್ರೀ ಎನ್.ಎಸ್ ಬೋಸರಾಜು ಅವರ ಉಪಸ್ಥಿತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಬೆಳವಣಿಗೆ ಮತ್ತು ಆಗಬೇಕಾಗಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಬೇಡಿಕೆಗಳನ್ನು ಈಡೇರಿಸಿಕೊಡುವ ಸಕಾರಾತ್ಮಕ ಸ್ಪಂದನವನ್ನು ಮಾನ್ಯ ಸಚಿವರು ನೀಡಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ.ಪಿ.ಜಿ.ಆರ್.ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಹಾಗೂ ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



ಬೆಂಗಳೂರು ಪೂರ್ವ ಜಿಲ್ಲೆ ಅನೇಕಲ್ ತಾಲ್ಲೂಕಿನ ಬೊಮ್ಮಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಸಾಹಿತಿ ಹಾಗೂ ಪ್ರಕಟಣಾ ಸಮಿತಿ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪನವರು ಉದ್ಘಾಟಿಸಿದರು. ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಆಯುಕ್ತರು (ವ.ಸಂ.) ಆದ ಶ್ರೀ ಚಿನ್ನಸ್ವಾಮಿ ರೆಡ್ಡಿ, ಕೇಂದ್ರ ಸ್ಥಾನಿಕ ಆಯುಕ್ತೆ ಶ್ರೀಮತಿ ಮುಕ್ತಾ ಬಿ. ಕಾಗಲೆ, ಗೌರಮ್ಮ ತಿಮ್ಮಾರೆಡ್ಡಿ ಫೌಂಡೇಷನ್ ಅಧ್ಯಕ್ಷ ಶ್ರೀ ಬಿ.ಟಿ. ನಾಗರಾಜ ರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಜೆ.ಎಂ. ಜಯಲಕ್ಷ್ಮಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 20 Issue : 09 September 2023


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಗಾಂಧಿ ಜಯಂತಿ ...05

ಶ್ರೀ ಪಿ.ಜಿ.ಆರ್. ಸಿಂಧ್ಯ ಅವರಿಗೆ 75ನೇ ಹುಟ್ಟುಹಬ್ಬದ ಸಂಭ್ರಮ ...06

National State & District Level
Best Teachers Award ...07

ಅಕ್ಟೋಬರ್ 2023ರ ಕಾರ್ಯಕ್ರಮಗಳು ...09

ಜಿಲ್ಲಾ ವಾರ್ತೆಗಳು ...10

ನಿಪಾಹ ವೈರಾಣು ...34


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

- ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್–ಗೈಡ್ಸ್ ಬಂಧುಗಳಿಗೆ**

ಮೊಟ್ಟಮೊದಲಿಗೆ, ಪ್ರಸಕ್ತ ಸಾಲಿಗೆ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಪ್ರಶಸ್ತಿಗಳಿಗೆ ಭಾಜನರಾಗಿರುವ ರಾಜ್ಯದ ಎಲ್ಲ ಶಿಕ್ಷಕ–ಶಿಕ್ಷಕಿಯರುಗಳನ್ನು ನಮ್ಮ ಸಂಸ್ಥೆಯ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಶಿಕ್ಷಕರುಗಳು ನಮ್ಮ ಚಳುವಳಿಯ ಬೆನ್ನೆಲುಬುಗಳಂತಿದ್ದಾರೆ. ಸೆಪ್ಟೆಂಬರ್ 5ರಂದು ರಾಜ್ಯದ ಎಲ್ಲ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಅರ್ಥಪೂರ್ಣವಾಗಿ ಶಿಕ್ಷಕ ದಿನಾಚರಣೆಯನ್ನು ಆಚರಿಸಿರುವುದು ಸಂತಸ ತಂದಿದೆ.

ಸ್ಕೌಟ್ಸ್ ಗೈಡ್ಸ್ ಘಟಕಗಳನ್ನು ಅಂಗನವಾಡಿ ಕೇಂದ್ರಗಳಿಂದ ಉನ್ನತ ಶಿಕ್ಷಣ ಸಂಸ್ಥೆಗಳವರೆಗೆ ಸ್ಥಾಪಿಸಬೇಕೆಂಬ ನಮ್ಮ ಮಹತ್ತರವಾದ ಉದ್ದೇಶ ಹಾಗೂ ರಾಜ್ಯದ ಎಲ್ಲ 36 ಶೈಕ್ಷಣಿಕ ಜಿಲ್ಲೆಗಳಲ್ಲಿನ ಪ್ರತಿ ಶಾಲೆಯಲ್ಲಿ ಕನಿಷ್ಠ ಒಂದು ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವನ್ನು ಸ್ಥಾಪಿಸುವ ನಮ್ಮ ಯೋಚನೆ ಸಾಕಾರಗೊಳ್ಳುವ ಭರವಸೆ ಮೂಡುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಉಪನ್ಯಾಸಕ/ ಉಪನ್ಯಾಸಕಿಯರಿಗೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳಿಗೆ ಯಶಸ್ವಿಯಾಗಿ ಆಯೋಜನೆಗೊಳ್ಳುತ್ತಿರುವ ಒಂದು ದಿನದ ಮಾಹಿತಿ ಶಿಬಿರಗಳು ನನ್ನಲ್ಲಿ ಇಂತಹ ಆಶಾಭಾವನೆ ಮೂಡಿಸುತ್ತಿವೆ. ನಮ್ಮ ತರಬೇತಿಗಳು ಶಿಕ್ಷಕರಿಗೆ ಮಕ್ಕಳಲ್ಲಿ ಜೀವನ ಕೌಶಲವನ್ನು ಕಲಿಸಲು ಒತ್ತು ಕೊಡುವುದರಲ್ಲಿ ಸಂಶಯವಿಲ್ಲ. ಈ ಮಾಹಿತಿ ಶಿಬಿರಗಳ ಆಯೋಜನೆಗೆ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ರಾಜ್ಯ ಸರ್ಕಾರಕ್ಕೆ, ಕಾಲೇಜು ಶಿಕ್ಷಣ, ಪದವಿಪೂರ್ವ ಶಿಕ್ಷಣ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿದೆ. ವೈಯಕ್ತಿಕವಾಗಿಯೂ ಸಹ ನಾನು ಅವರೆಲ್ಲರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾಹಿತಿ ಶಿಬಿರಗಳಲ್ಲಿ ಉತ್ಸುಕತೆಯಿಂದ ಭಾಗವಹಿಸುತ್ತಿರುವ ಉಪನ್ಯಾಸಕ–ಉಪನ್ಯಾಸಕಿಯರು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆಗಳು.

ರಾಜ್ಯ ಸಂಸ್ಥೆಯ ಹಲವು ಪದಾಧಿಕಾರಿಗಳೂ ಸಹ ಕೆಲವು ಜಿಲ್ಲೆಗಳಿಗೆ ಭೇಟಿ ಕೊಟ್ಟು, ಒಂದು ದಿನದ ಮಾಹಿತಿ ಶಿಬಿರಗಳಲ್ಲಿ ಭಾಗವಹಿಸುತ್ತಿರುವುದು ಸಂತೋಷದ ಸಂಗತಿ. ಸಂಘಟನೆಗೆ ಸ್ವಲ್ಪ ಸಮಯ ಕೊಡಿ ಎಂಬ ನನ್ನ ಕಳಕಳಿಯ ಮನವಿಗೆ ಸ್ಪಂದಿಸುತ್ತಿರುವ ಎಲ್ಲರಿಗೂ ಧನ್ಯವಾದಗಳು.

ಸೆಪ್ಟೆಂಬರ್ 13 ರಂದು ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರು ಹಾಗೂ ನಮ್ಮ ಚಳುವಳಿಯ ಪ್ರೋತ್ಸಾಹಕರೂ ಆಗಿರುವ ಶ್ರೀ ಎನ್.ಎಸ್. ಬೋಸರಾಜು ಅವರು ಪೂರ್ವನಿಶ್ಚಯದಂತೆ ನಮ್ಮ ಕೇಂದ್ರ ಕಛೇರಿಗೆ ಬಂದಿದ್ದರು. ಅವರ ಸಲಹೆಯಂತೆ ಆ ದಿನ ಕರೆದಿದ್ದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಪದಾಧಿಕಾರಿಗಳ ಸಭೆಯಲ್ಲಿ, ಚಳುವಳಿಯ ಬೆಳವಣಿಗೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಕುರಿತ ನಮ್ಮ ಎಲ್ಲ ಮನವಿಗಳಿಗೆ ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅವರಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ॥ ಅಜಯ್ ಸಿಂಗ್ ಮತ್ತು ಆ ಭಾಗದ ಮಂತ್ರಿಗಳಿಗೆ, ಶಾಸಕರುಗಳಿಗೂ ಸಹ ಅನುದಾನ ಹಂಚಿಕೆ ಮಾಡುವ ಬಗ್ಗೆ ಮನವಿ ಮಾಡಿದ್ದು, ಸ್ವಲ್ಪಮಟ್ಟಿಗಾದರೂ ಸಫಲತೆ ಕಾಣುವ ನಿರೀಕ್ಷೆ ಇದೆ.

ನಮ್ಮ ಸಂಸ್ಥೆಯ ಹೆಮ್ಮೆಯ ಕಾರ್ಯಕ್ರಮಗಳಲ್ಲೊಂದಾದ ಗೀತಗಾಯನ ಸ್ಪರ್ಧೆಯನ್ನು ಈ ಬಾರಿ ಹಿರಿಯ ಸಾಹಿತಿಗಳೂ, ರಾಜ್ಯದಲ್ಲಿ ನಮ್ಮ ಚಳುವಳಿಯ ಮಾರ್ಗದರ್ಶಕರೂ ಆಗಿರುವ ಡಾ. ಗೊ.ರು. ಚನ್ನಬಸಪ್ಪ ಅವರಿಗೆ ಅರ್ಪಿಸುತ್ತಿರುವುದು ಔಚಿತ್ಯಪೂರ್ಣವಾಗಿದೆ. ಇದರಿಂದ ಕಾರ್ಯಕ್ರಮಕ್ಕೆ ಘನತೆ ಬಂದಿದೆ. ಅದರ ಮೌಲ್ಯ ವೃದ್ಧಿಯಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನಿರೀಕ್ಷೆಗೂ ಮೀರಿದ ಸಂಖ್ಯೆಯ ಮಕ್ಕಳು ಭಾಗವಹಿಸಿ, ತಮ್ಮ ಪ್ರತಿಭೆಗಳ ಪ್ರದರ್ಶನ ಮಾಡಿದ್ದಾರೆ. ಅದರ ಅಂತಿಮ ಮತ್ತು ರಾಜ್ಯಮಟ್ಟದ ಸ್ಪರ್ಧೆ ಈ ತಿಂಗಳ 30 ರಂದು ಕೇಂದ್ರ ಕಛೇರಿಯಲ್ಲಿ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸಿರುವ ಎಲ್ಲ ಮಕ್ಕಳಿಗೆ ಅಭಿನಂದನೆಗಳು.

ನಮ್ಮ ಎಲ್ಲ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಒಂದು ದಿನದ ಮಾಹಿತಿ ಶಿಬಿರಗಳು, ಗೀತಗಾಯನ ಸ್ಪರ್ಧೆ, ಶಿಕ್ಷಕ ದಿನಾಚರಣೆ ಮುಂತಾದ ಕಾರ್ಯಕ್ರಮಗಳ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದವರೆಲ್ಲರಿಗೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು, ಈ ತಿಂಗಳ 19 ರಂದು ನನ್ನ 75ನೇ ವರ್ಷದ ಹುಟ್ಟುಹಬ್ಬ. ನನ್ನ ಹಿತೈಷಿಗಳಿಗೆ ಈ ಬಾರಿಯ ನನ್ನ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಹಂಬಲವಿದ್ದರೂ, ರಾಜ್ಯದಲ್ಲಿ ಬರದ ಛಾಯೆ ಇರುವುದರಿಂದ ಎಲ್ಲಿಯೂ ನನ್ನ ಹುಟ್ಟುಹಬ್ಬದ ಆಚರಣೆ ಬೇಡ ಎಂದು ಮನವಿ ಮಾಡಿದ್ದೆ. ಆದರೂ ಸಹ ಹಲವು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಬಂಧುಗಳು, ಮಕ್ಕಳು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಿದ್ದಾರೆ. ಹಿರಿಯರಿಂದ ಹಿಡಿದು ಮಕ್ಕಳವರೆಗೆ ಹಲವರು ದೂರವಾಣಿಗಳ ಮುಖೇನ, ಪತ್ರಗಳ ಮುಖೇನ ಶುಭಾಶಯಗಳನ್ನು ತಿಳಿಸಿದ್ದಾರೆ. ಇತ್ತೀಚೆಗೆ ನಾನು ಭೇಟಿ ನೀಡಿದ್ದ ಜಿಲ್ಲೆಗಳಲ್ಲೂ ನನಗೆ ಪ್ರೀತ್ಯಾದಾರಗಳನ್ನು ತೋರುತ್ತಿದ್ದಾರೆ. ಎಲ್ಲರಿಗೂ ನಾನು ಚಿರಋಣಿ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ



(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಕೆಲವರಿಗೆ ಊಟ ಬಿಸಿ ಇದ್ದರೆ ರುಚಿ. ಇನ್ನು ಕೆಲವರಿಗೆ ಅದು ತಣ್ಣಗಿದ್ದರೆ ರುಚಿ
ಆದರೆ ಹಸಿದವರಿಗೆ ಹಳಸಿದ್ದರೂ ಅದು ಪರಮಾನ್ನ.
ಆಹಾರ ವ್ಯರ್ಥ ಮಾಡಬೇಡಿ

# ಗಾಂಧಿ ಜಯಂತಿ


**ನಾಡೋಜ ಡಾ. ಗೊ.ರು. ಚೆನ್ನಬಸಪ್ಪ**

ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ, ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ




ಇಂದು ಗಾಂಧಿ ಜಯಂತಿ. ನಮ್ಮ ಕಾಲದಲ್ಲೇ ಕಣ್ಮರೆಯಾದ, ಆದರೆ ಮನ ಮರೆಯಲಾಗದ ಒಂದು ಅದ್ವಿತೀಯ ಚೇತಸ್ಸು ಮಹಾತ್ಮಗಾಂಧಿ, ಅವರು ರಾಷ್ಟ್ರಭಕ್ತರಷ್ಟೇ ಆಗಿರಲಿಲ್ಲ, ವಿಶ್ವ ಪ್ರೇಮಿಗಳಾಗಿದ್ದರು, ಸತ್ಯಾನ್ವೇಷಕರಾಗಿದ್ದರು; ಅಹಿಂಸಾವಾದಿಗಳಾಗಿದ್ದರು; ಶಾಂತಿಪ್ರಿಯರಾಗಿದ್ದರು, ಅವರು ಮಹಾತ್ಮರೆನಿಸಿಕೊಂಡದ್ದು ಈ ಮಾನವ ಘನತೆಯ ಮೌಲ್ಯಗಳಿಂದಾಗಿಯೇ.

ಸರಳತೆ, ಸ್ಪಷ್ಟತೆ, ಸಂಕಲ್ಪ, ಸಾಹಸ, ಸ್ವಾಭಿಮಾನ, ಸ್ವಾತಂತ್ರ್ಯ, ಸ್ವಾವಲಂಬನೆ, ಸ್ಥೈರ್ಯ, ಸೌಜನ್ಯ, ಶಾಂತಿ, ಸೌಹಾರ್ದ – ಈ ಎಲ್ಲ ಶಬ್ದಗಳಿಗೂ ಒಂದು ಸಮನ್ವಿತ ಅರ್ಥವಾಗಿದ್ದವರು ಗಾಂಧೀಜಿ. ಈ ಮಾನವೀಯ ಗುಣಗಳ ಗಣಿಯಾಗಿ ಅವರು ಲೋಕಕ್ಕೆ ಪರಿಚಿತರಾದರು. ಅವರ ಸಾಧನೆ ಪವಾಡ ಎನಿಸಿಕೊಂಡಿತು.

ಗಾಂಧೀಜಿ ಎಂದೂ ತಮ್ಮನ್ನು 'ಪ್ರವಾದಿ ಎಂದಾಗಲೀ, 'ಪವಾಡ ಪುರುಷ' ಎಂದಾಗಲೀ ಕರೆದುಕೊಂಡವರಲ್ಲ. ಹಾಗೆ ಕರೆಯುವವರನ್ನು, ಬಸವಣ್ಣನವರು 'ನೀನೆನಗೊಳ್ಳಿದನಾದರೆ ಎನ್ನ ಹೊಗಳತೆಗೆ ಅಡ್ಡಬಾರಾ ಧರ್ಮಿ' ಎನ್ನುವಂತೆ, ಖಂಡಿಸಿದ್ದುಂಟು. ಗಾಂಧೀಜಿ ಅವರು 20ನೆಯ ಶತಮಾನದ ಬಹು ದೊಡ್ಡ ರಾಜಕೀಯ ಮತ್ತು ಸಾಮಾಜಿಕ ಸುಧಾರಕರು. ಹಾಗೆಯೇ ಅವರೊಬ್ಬ ಧಾರ್ಮಿಕ ವ್ಯಕ್ತಿಯೂ ಆಗಿದ್ದರು. ಅವರಿಗೆ ದೈವದ ಬಗೆಗೆ ಅಚಲವಾದ ಭಕ್ತಿಯಿತ್ತು. ಮಾನವ ಕಲ್ಯಾಣವೆಂದರೆ, ಕೇವಲ ಆರ್ಥಿಕ ಮತ್ತು ಭೌತಿಕ ಪ್ರಗತಿಯಲ್ಲ, ಪ್ರತಿಯೊಬ್ಬ ವ್ಯಕ್ತಿಯಲ್ಲೂ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಮೈಗೂಡಬೇಕೆಂಬುದು ಅವರ ಉತ್ಕಟ ಹಂಬಲವಾಗಿತ್ತು.

ಭಾರತೀಯ ಪರಂಪರೆಗೆ ಅತ್ಯುನ್ನತ ಗೌರವ ನೀಡಿದ್ದ ಮಹಾತ್ಮ ಗಾಂಧೀಜಿ ಅವರು ಓರ್ವ ಸಂತರಾಗಿದ್ದರು; ದಾರ್ಶನಿಕರಾಗಿದ್ದರು. ಆದರೆ ಅವರ ವಿಶೇಷವೆಂದರೆ, ಉಳಿದ ಸಂತರಂತೆ ಕೇವಲ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದವರಲ್ಲ; ಅದರಷ್ಟೇ ಲೌಕಿಕಸೇವೆಯೂ ಆಧ್ಯಾತ್ಮಿಕ ಸಾಧನೆಯೇ ಎಂದು ತಿಳಿದಿದ್ದವರು. ಎಂತಲೇ ಅವರು ತಮ್ಮ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಬಂಡೆದ್ದು ನಿಂತರು. ಅದಕ್ಕಾಗಿ ಕೋಟಿ ಕೋಟಿ ಜನರನ್ನು ಸಂಘಟಿಸಿದರು.

ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯೊಂದೇ ಗಾಂಧೀಜಿ ಅವರ ಗುರಿಯಾಗಿರಲಿಲ್ಲ. ಈ ದೇಶದ ಜನ ಸ್ವತಂತ್ರರಾಗುವುದರ ಜೊತೆಗೆ ಸ್ವಾಭಿಮಾನಿಗಳಾಗಿ, ಸ್ವಾವಲಂಬಿಗಳಾಗಿ, ಸಭ್ಯರಾಗಿ ನೆಮ್ಮದಿಯಿಂದ ಬದುಕುವಂತಾಗಬೇಕೆಂಬುದು ಅವರ ಆಶಯವಾಗಿತ್ತು. ಮುಖ್ಯವಾಗಿ ವಿಶ್ವದ ಪ್ರತಿಯೊಬ್ಬ ವ್ಯಕ್ತಿಯೂ ಶೀಲ – ಚಾರಿತ್ರ್ಯಗಳ, ಸನ್ನಡತೆಯ, ಸ್ನೇಹ ಸೌಹಾರ್ದತೆಯ ನಾಗರಿಕನಾಗಬೇಕೆಂಬುದು ಅವರ ಆತ್ಯಂತಿಕ ಹಾರೈಕೆಯಾಗಿತ್ತು.

ಗಾಂಧೀಜಿ ಅವರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರೆಂದು ಲೋಕದಲ್ಲಿ ಗುರುತಿಸಲ್ಪಟ್ಟರೂ, ಸ್ವಾತಂತ್ರ್ಯ ರಕ್ಷಣೆಗೆ ಸಮರ್ಥ ವ್ಯಕ್ತಿ ನಿರ್ಮಾಣವೇ ಅವರಿಗೆ ಮುಖ್ಯವಾಗಿತ್ತು. ಅವರ ಆಶ್ರಮದಲ್ಲಿ ನಾನಾ ಜಾತಿ, ಮತ, ಪಂಥ, ವರ್ಣ, ವರ್ಗ, ಧರ್ಮ, ದೇಶಗಳಿಗೆ ಸೇರಿದವರೆಲ್ಲ ಇದ್ದರು. ಅಲ್ಲಿ ರಾಜವಂಶದವರಿದ್ದರು, ಕೋಟ್ಯಾಧೀಶರಿದ್ದರು, ದೀನ-ದಲಿತ ಶ್ರಮಜೀವಿಗಳಿದ್ದರು, ಸಂತರಿದ್ದರು, ಸಂಸಾರಿಗಳಿದ್ದರು. ಅವರೊಂದು ಗುರುತ್ವಾಕರ್ಷಕ ಶಕ್ತಿಯಾಗಿದ್ದರು. ಬಾಪೂಜಿ ಬಳಿಗೆ ಬಂದವರೆಲ್ಲ ಅವರನ್ನು ರಾಜಕೀಯ ವ್ಯಕ್ತಿ ಎಂದು ಕಂಡವರಲ್ಲ; ಅವರೊಬ್ಬ ದಾರ್ಶನಿಕರೆಂದು, ಅನುಭಾವಿಯೆಂದು ಕಂಡವರು. ಹಾಗಾಗಿ ಗಾಂಧೀಜಿ ಅವರು ಪೂಜ್ಯರೆನಿಸಿಕೊಂಡರು; ಪುಣ್ಯ ಪುರುಷರೆನಿಸಿಕೊಂಡರು. ಅವರು ವಿನಮ್ರತೆ-ಸರಳತೆಗಳಿಗೆ ಲೋಕಸಾಕ್ಷಿಯಾಗಿದ್ದರು.

ಇಂತಹ ಮಹೋಜ್ವಲ ಜೀವಿ ತಮ್ಮ ಅಂತ್ಯಕಾಲದಲ್ಲಿ ಕಂಡದ್ದೇ ಬೇರೆ, ಅವರು ಯಾವ ಒಳಿತಿಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ಪಣವಾಗಿಟ್ಟರೋ ಆ ಒಳಿತಿನ ಬದಲಾಗಿ ಕೆಡುಕುಗಳ ಕ್ರೂರ ದುರಂತ ದೃಶ್ಯಗಳನ್ನೇ ಕಾಣಬೇಕಾಯಿತು. ಸ್ವಾತಂತ್ರ್ಯ ಬಂದಿತೆಂದು ದೇಶವೆಲ್ಲ ಸಂಭ್ರಮಿಸುತ್ತಿದ್ದಾಗ, ಆಗ ನಡೆದ ಘಟನೆಗಳಿಂದಾಗಿ ಗಾಂಧೀಜಿ ನೊಂದು ಬೆಂದು ಹೋಗಿದ್ದರು. ಆ ಕೊರಗಿನ ಜೀವನದ ಮೇಲೆ ಮತಿಹೀನನೊಬ್ಬ ಯಮನಾಗಿ ಎರಗಿಬಿಟ್ಟ. ಕುವೆಂಪು ಅವರು ಹೇಳುವಂತೆ 'ಅದೃಷ್ಟಹೀನ ಭಾರತ' ರಾಷ್ಟ್ರಪಿತನನ್ನು ಕಳೆದುಕೊಂಡಿತು.

ನಮ್ಮ ಕಾಲದ ಈ ವಿಭೂತಿಪುರುಷ ದೇಶಕ್ಕೆ ನೀಡಿದ ಸಂದೇಶಕ್ಕೆ ಬದುಕಿದ ಆದರ್ಶಕ್ಕೆ ಇಂದು ಒದಗಿರುವ ದುರಂತ ಸ್ಥಿತಿಯನ್ನು ಕಂಡು ಕವಿ ಸಿ.ಪಿ.ಕೆ ಅವರು ತಮ್ಮ ಒಂದು ಕಿರುಗವನದಲ್ಲಿ.

"ಗಾಂಧಿ ಜಯಂತಿಯಂದು ಮಾಂಸ ತಿನ್ನಬಹುದೇ ಎಂದು ಮನಸ್ಸೊಮ್ಮೆ ಕೇಳಿತು. ಆಗ ಮನಸ್ಸೇ ಹೇಳಿತು. 'ಅಯ್ಯೋ ಹುಚ್ಚ, ಗಾಂಧಿಯನ್ನೇ ಕೊಂದಿದ್ದೇವೆ, ಮಾಂಸದಲ್ಲೇನಿದ್ದೆ' ಎಂದು". ಈ ಕವಿನುಡಿ ಕಿವಿಗೆ ಸ್ವಾರಸ್ಯವೆನಿಸಿದರೂ, 'ಗಾಂಧಿ ಜಯಂತಿ'ಯನ್ನು ಆಚರಿಸುತ್ತಿರುವ ನಮ್ಮನ್ನೆಲ್ಲ ಅನ್ಯಾದೃಶವಾಗಿ ಅಣಕಿಸುತ್ತದೆ. ಈ ಕಿರುಗವನವನ್ನು ಸರಿಯಾಗಿ ಅರಿತುಕೊಂಡರೆ ಮಾತ್ರ ನಾವು ಗಾಂಧಿ ಜಯಂತಿಯನ್ನು ಆಚರಿಸಲು ಅರ್ಹರಾಗುತ್ತೇವೆಂದು ನಾನು ತಿಳಿದಿದ್ದೇನೆ. ಅದು ಹೊರತಾಗಿ ನಡೆಯುವ ಆಚರಣೆ ಕೇವಲ ಕೃತಕವೆನಿಸುತ್ತದೆ; ಶಾಸ್ತ್ರಪದ್ಧತಿಯ ಪ್ರದರ್ಶನವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಾವು ಗಾಂಧೀಜಿ ಅವರನ್ನು ಸ್ಮರಿಸಿಕೊಳ್ಳಬೇಕು, ಕೇವಲ ಸ್ಮರಣೆಯಲ್ಲ, ಅವರ ಆದರ್ಶ ನುಡಿ-ನಡೆಗಳನ್ನು ನಮ್ಮ ನುಡಿ-ನಡೆಗಳಲ್ಲಿ ತುಂಬಿಕೊಳ್ಳಬೇಕು. ಅಂತಾದರೆ ಮಾತ್ರ ಅವರ ಜಯಂತಿ ಆಚರಣೆ ಅರ್ಥಪೂರ್ಣವಾಗುತ್ತದೆ.

## ನಮ್ಮ ಹೆಮ್ಮೆಯ
## ಕ್ರಿಯಾಶೀಲ ರಾಜ್ಯ ಮುಖ್ಯ ಆಯುಕ್ತರಾದ
# ಶ್ರೀ ಪಿ.ಜಿ.ಆರ್.ಸಿಂಧ್ಯ ಅವರಿಗೆ
# 75ನೇ ಹುಟ್ಟುಹಬ್ಬದ ಸಂಭ್ರಮ



ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಜನನವು 19-09-1949 ರಂದು ಕನಕಪುರ ತಾಲ್ಲೂಕಿನ ದೊಡ್ಡಮರಳವಾಡಿ ಗ್ರಾಮದ ಒಂದು ಕೃಷಿ ಕುಟುಂಬದಲ್ಲಿ ಆಯಿತು. ತಂದೆ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಪಾಂಡುರಂಗ ರಾವ್ ಸಿಂಧ್ಯ ಅವರು ಮತ್ತು ತಾಯಿ ಶ್ರೀಮತಿ ಸರಸ್ವತಿ ಬಾಯಿ ಅವರು. ಶ್ರೀ ಪಿ.ಜಿ.ಆರ್.ಸಿಂಧ್ಯರವರ ಪ್ರಾಥಮಿಕ ವಿದ್ಯಾಭ್ಯಾಸವು ಸ್ವಗ್ರಾಮ ಹಾಗೂ 15 ಕಿಮೀ ದೂರದಲ್ಲಿರುವ ಹಾರೋಹಳ್ಳಿಯಲ್ಲಿ ನಡೆಯಿತು. ಕಾಲೇಜು ವಿದ್ಯಾಭ್ಯಾಸವು ಬೆಂಗಳೂರಿನ ಪ್ರತಿಷ್ಠಿತ ನ್ಯಾಷನಲ್ ಕಾಲೇಜಿನಲ್ಲಿ ಮತ್ತು ಇಂಜಿನಿಯರಿಂಗ್ ವಿದ್ಯಾಭ್ಯಾಸ ಆರ್.ವಿ.ಕಾಲೇಜಿನಲ್ಲಿ ಆಯಿತು.

ಇವರು ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವಾಗಲೇ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಮಂಡಳಿಯ ಅಧ್ಯಕ್ಷರಾಗಿದ್ದರು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕ್ರಿಯಾಶೀಲರಾಗಿದ್ದವರು.

1975ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಲೋಕನಾಯಕ ಶ್ರೀ ಜಯಪ್ರಕಾಶ ನಾರಾಯಣ ಅವರಿಂದ ಪ್ರೇರಿತರಾಗಿ, ಸದರಿ ಕರಾಳ ಕಾನೂನನ್ನು ಪ್ರತಿಭಟಿಸಿದಾಗ, ಅಂದಿನ ಕೇಂದ್ರ ಸರ್ಕಾರವು ಶ್ರೀಯುತರನ್ನು VISA ಕಾಯ್ದೆಯಡಿ ಬಂಧಿಸಿತ್ತು. ನಾಗರೀಕರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ 19 ತಿಂಗಳುಗಳ ಕಾಲ ಅನೇಕ ಗಣ್ಯರೊಂದಿಗೆ ಜೈಲುವಾಸವನ್ನು ಇವರು ಅನುಭವಿಸಿದರು.

1983 ರಿಂದ 2004 ರವರೆಗೆ, ಕನಕಪುರ ಕ್ಷೇತ್ರದಿಂದ ಆರು ಬಾರಿ ವಿಧಾನಸಭೆಯ ಸದಸ್ಯರಾಗಿ, ಒಂದು ಬಾರಿ ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದರು. 18 ವರ್ಷಗಳ ಕಾಲ ಕರ್ನಾಟಕ ಸರ್ಕಾರದ ಕ್ಯಾಬಿನೆಟ್ ಸಚಿವರಾಗಿ 20ಕ್ಕೂ ಹೆಚ್ಚು ಖಾತೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿರುವುದು ಶ್ರೀ ಸಿಂಧ್ಯ ಅವರ ಹಿರಿಮೆ ಮತ್ತು ಗರಿಮೆಯಾಗಿದೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಸಿಂಧ್ಯ ಅವರು ಸ್ತುತ್ಯಾರ್ಹ ಮಾದರಿಯನ್ನು ಸೃಷ್ಟಿಸಿರುತ್ತಾರೆ.

ಪ್ರಸ್ತುತ ಶ್ರೀ ಸಿಂಧ್ಯ ಅವರು ಸ್ಕೌಟ್-ಗೈಡ್ ಚಳವಳಿಯಲ್ಲದೆ, ಇತರೆ ಅನೇಕ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತರಾಗಿ, ಅಖಿಲ ಭಾರತ ಸ್ಕೌಟ್ಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಅವರೀಗ ಸೇವೆ ಸಲ್ಲಿಸುತ್ತಿದ್ದಾರೆ. ಸ್ಕೌಟ್ಸ್ ಗೈಡ್ಸ್ ರಾಜ್ಯ ಸಂಸ್ಥೆಯಲ್ಲಿ ಅವರ ರಾಜ್ಯ ಮುಖ್ಯ ಆಯುಕ್ತರ ಅವಧಿಯ ಇತ್ತೀಚಿನ ಹತ್ತು ವರ್ಷಗಳಲ್ಲಿ ರಾಜ್ಯಮಟ್ಟದ 2 ಜಾಂಬೋರೇಟ್‌ಗಳನ್ನು, ರಾಷ್ಟ್ರಮಟ್ಟದ ಒಂದು ಜಾಂಬೋರಿಯನ್ನು ಮತ್ತು ಪ್ರಪ್ರಥಮ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ "ಅಂತರರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೋರಿಯನ್ನು" ಯಶಸ್ವಿಯಾಗಿ ನಡೆಸಿರುತ್ತಾರೆ. ಹಲವಾರು ಶಿಬಿರಗಳು, ಕಾರ್ಯಾಗಾರಗಳು ಹಾಗೂ ತರಬೇತಿಗಳು ನಿರಂತರವಾಗಿ ನಡೆಯುತ್ತಿವೆ. ಸಂಸ್ಥೆಗೆ ಒಂದು ಕಾಯಕಲ್ಪ ಕೊಡುವ ಗುರಿಯೊಂದಿಗೆ, ಸರ್ಕಾರ, ಶಿಕ್ಷಣ ಇಲಾಖೆ, ಸರ್ಕಾರದ ಮತ್ತಿತರ ಇಲಾಖೆಗಳೊಂದಿಗೆ ಹಾಗೂ ಸಮಾಜ ಸೇವಾಕಾಂಕ್ಷಿಗಳು, ಜನನಾಯಕರುಗಳು, ಸಂಘ-ಸಂಸ್ಥೆಗಳು, ಇತ್ಯಾದಿಗಳವರೊಂದಿಗೆ ಉತ್ತಮ ಸಂಪರ್ಕ ಸಾಧಿಸಿ, ಚಳವಳಿಯ ಬೆಳವಣಿಗೆಗೆ ಹಗಲಿರುಳು ಚಿಂತಿಸಿ, ಶ್ರಮಿಸುತ್ತಿರುವರು. ಒಟ್ಟಿನಲ್ಲಿ ಶ್ರೀ ಸಿಂಧ್ಯಾರವರು ತಮ್ಮ ಕ್ರಿಯಾಶೀಲ ಮಾರ್ಗದರ್ಶನದಲ್ಲಿ ಸ್ಕೌಟ್-ಗೈಡ್ ಚಳವಳಿಯನ್ನು ಯಶಸ್ಸಿನತ್ತ ಕೊಂಡೊಯ್ಯುತ್ತಿರುವುದು ಶ್ಲಾಘನೀಯ.

ಅವರ ಜೀವನದ ಹೋರಾಟ ಮತ್ತು ಸಮಾಜಮುಖಿ ಕಾರ್ಯಗಳು ಇಂದಿನ ಪೀಳಿಗೆಯ ಯುವಕರಿಗೆ, ಬೆಳೆಯಬೇಕೆನ್ನುವ ರಾಜಕಾರಣಿಗಳಿಗೆ, ಧಾರ್ಮಿಕ, ಆಧ್ಯಾತ್ಮಿಕ ಹಿತಚಿಂತನೆಯಲ್ಲಿರುವವರಿಗೆ ಪ್ರೇರಣೆ ನೀಡುವಂಥದ್ದು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ, ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆಗಳ ಮತ್ತು ರಾಜ್ಯದ ಎಲ್ಲಾ ಕಬ್ಸ್-ಬುಲ್‌ಬುಲ್ಸ್/ ಸ್ಕೌಟ್ಸ್-ಗೈಡ್ಸ್/ ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕ-ದಳನಾಯಕಿಯರುಗಳ ವತಿಯಿಂದ ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು. ಇವರಿಗೆ ಉತ್ತಮ ಆಯುರಾರೋಗ್ಯ ಲಭಿಸಿ, ಸರ್ವ ರೀತಿಯಲ್ಲೂ ಶ್ರೇಯಸ್ಸಿನೊಂದಿಗೆ ಶತಾಯುಷಿಗಳಾಗುವಂತೆ ಆಶೀರ್ವದಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

# NATIONAL, STATE & DISTRICT LEVEL BEST TEACHERS AWARD RECEIVED BY SCOUT MASTERS/GUIDE CAPTAINS FROM DEPARTMENT OF PUBLIC INSTRUCTION FOR THE YEAR 2023-24



## NATIONAL BEST TEACHER AWARD

**SAPNA S. ANIGOL**
GUIDE CAPTAIN
K.L.E.S'S.C.P JR COLLEGE
(HIGH SCHOOL SECTION)
MAHALINGPUR, MUDHOL TALUK, BAGALKOT

## STATE LEVEL BEST TEACHER AWARD

**M.D. HARIKANTHRA**
BASIC SCOUT MASTER
GOVT HIGHER PRIMARY SCHOOL
BERANKI, HONNAVARA TALUKT
KARWAR



## DISTRICT LEVEL BEST TEACHER AWARD



**CHANDRASHEKHAR V. DADANATTI**
SCOUT MASTER
SHRI DHAVALANATHA AIDED KANNADA HPS
DHAVALESHWARA MUDHOL BAGALKOTE



**IMAMSAB M. HIPPARAGI**
SCOUT MASTER (ADV)
ADARSHA VIDHYALA, LOKAPUR TALUK
LAXAMATHI MUDHOL, BAGALKOTE



**TANAJI BALU LOKARE**
PRE-ALT
M.H.P.S. NANGANUR
NIPPANI TALUK, BELAGAVI



**KANTHA KUMAR**
HWB (C)
ST. JOSEPH K.H.P.S
KOPPA TALUK, CHIKKAMAGALUR



**M. VISHWANATHA**
HWB (S)
GOVT. HIGHER PRIMARY SCHOOL, KADABANAKATTE,
CHITRADURGA TALUK, CHITRADURGA



**UDAYAKUMAR RAI .S**
HWB (S)
VIDYABODHINI HIGH SCHOOL, BALILA, PANJA
SULLYA TALUK, DAKSHINA KANNADA



**HALAPPA .D**
PRE-ALT
C.V.V HIGHER PRIMARY SCHOOL
S.K.P. ROAD, DAVANGERE



**SIDDAPPA H.S**
HWB
GOVT. HIGH SCHOOL, DEVIKERE JAGALURU TQ.
DAVANGERE -577553



**SUDHA H.H**
HWB (G)
GOVT. H.P.S SORATUR HONNALLI TALUK
DAVANGERE



**SHAMSHADBEGUM A. MANIYAR**
PRE-ALT
GOVT. URDU HIGHER PRIMARY SCHOOL
AMARGOL, HUBBALI, DHARWAD



**SHIVAGANGA M. HIREMATA**
PRE-ALT
G.H.P.S SANKADAL, NARGUDA
GADAG



**H.K. IRAGAR**
BASIC SCOUT MASTER
G.H.P.S ARASHINAGODI
NARAGUND TALUK, GADAG



**SHIVABASAYYA PANCHAYYA CHILLURMATH**
SCOUT MASTER (ADV)
GOVT. HIGHER PRIMARY SCHOOL
DOLLESHWARA TALUK, HANAGAL, HAVERI



**APPASAHEB B. TEERTHE**
HWB (S)
V.V.H.P.S ALAND
KALABURGI



**NATARAJ SONAR**
CUB MASTER
G.L.P SCHOOL M. BASAPURA
KUSTAGI TALUK, KOPPAL



**JAYASHREE KOTABAL**
GUIDE CAPTAIN
KPS (M H P S) BANDI
KOPPAL



**T.V SUNDARESHMURTHY (2022-23)**
SCOUT MASTER
GOVT. HIGH SCHOOL GANJAM
SRIRANGAPATANA, MANDYA



**GANGAMMA M. KATTIMANI**
GUIDE CAPTAIN (ADV)
SRI AMARESHWARA GIRLS HIGH SCHOOL,
LINGASUGURU



**ISHWARAPPA MALLADAD**
CUB MASTER (ADV)
UPGRADE GOVT. HIGHER PRIMARY SCHOOL
GONWATALA TANDA LINGASUGUR TALUK, RAICHUR



**MUTTAKKA BENAKANAHALLI**
ALT (G)
GHPS, DHADESUGURA, SINDHANUR TALUK
RAICHURU



**SHIVARAMAIAH**
SCOUT MASTER (ADV)
G.H.P.S YAREHALLI, RAMANAGARA TALUK,
RAMANAGARA DISTRICT.



**SURESH .P**
SCOUT MASTER
K.P.S ARALALUSANDRA
CHENNAPATANA TALUK, RAMANAGARA

**RESHMA JUJE RODRIGUES**
GUIDE CAPTAIN
HPS PANCHALINGA, SIRSI TALUK
SIRSI



# ಅಭಿನಂದನೆಗಳು



ಗೌರವಾನ್ವಿತ ರಾಷ್ಟ್ರಪತಿಗಳಿಂದ "ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕಿ" ಪ್ರಶಸ್ತಿಯನ್ನು ಪಡೆದ ಬಾಗಲಕೋಟೆ ಜಿಲ್ಲೆಯ ಮುದೋಳ ತಾಲ್ಲೂಕಿನ ಕೆ.ಎಲ್.ಇ. ಎಸ್.ಸಿ.ಪಿ ಪ್ರೌಢಶಾಲೆಯ ಮಹಾಲಿಂಗಪುರ ಕ್ರಿಯಾಶೀಲ ಗೈಡ್ ಕ್ಯಾಪ್ಟನ್ ಶ್ರೀಮತಿ ಸಪ್ನಾ ಅನಿಗೋಳ ರವರಿಗೆ ಅಭಿನಂದನೆಗಳು.

-ರಾಜ್ಯ ಕಾರ್ಯದರ್ಶಿ

## ಅಕ್ಟೋಬರ್ 2023 ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 01 | ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮ ದಿನಾಚರಣೆ | 02.10.2023 | ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ |
| 02 | ಜಾಂಬೂರಿ ಆನ್ ದಿ ಏರ್ ಮತ್ತು ಇಂಟರ್‌ನೆಟ್ | 14.10.2023 ಮತ್ತು 15.10.2023 | ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ |
| 03 | ರೋವರ್ಸ್- ರೇಂಜರ್ಸ್‌ಗಳ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಗಳು | - | ರಾಜ್ಯ ಮಟ್ಟದಲ್ಲಿ |
| 04 | ರಾಜ್ಯಪುರಸ್ಕಾರ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಪರೀಕ್ಷಾ ಶಿಬಿರ | 05.10.2023 ರಿಂದ 07.10.2023 | ದೊಡ್ಡಬಳ್ಳಾಪುರ, ಕೊಂಡಜ್ಜಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ |
| 05 | ಸಿ.ಆರ್.ಪಿ, ಬಿ.ಆರ್.ಪಿ, ದೈಹಿಕ ಶಿಕ್ಷಣ ಅಧಿಕಾರಿಗಳು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳ ಸಭೆ | - | ಜಿಲ್ಲಾ ಹಂತಗಳಲ್ಲಿ |
| 06 | ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರಿಗೆ ರೋವರ್-ರೇಂಜರ್ ಪ್ರಾರಂಭಿಕ ಶಿಬಿರಗಳು | 04.10.2023<br>06.10.2023<br>09.10.2023<br>12.10.2023<br>20.10.2023<br>21.10.2023<br>30.10.2023<br>31.10.2023 | ಬೆಂಗಳೂರು<br>ಮಂಗಳೂರು<br>ಮೈಸೂರು<br>ಶಿವಮೊಗ್ಗ<br>ಧಾರವಾಡ<br>ಬೆಳಗಾವಿ<br>ಬಳ್ಳಾರಿ<br>ಕಲಬುರ್ಗಿ |



# ಜಿಲ್ಲಾ ವಾರ್ತೆಗಳು

## ಬಿ.ಬಿ.ಎಂ.ಪಿ. ಬೆಂಗಳೂರು

ಆಗಸ್ಟ್ 01 ರಿಂದ 31ರ ವರೆಗೆ ಕೆ.ಆರ್.ಇ.ಡಿ.ಎಲ್. ಸಂಸ್ಥೆ ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟ್ಟ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬಿ.ಬಿ.ಎಂ.ಪಿ. ಜಿಲ್ಲಾ ಸಂಸ್ಥೆಯ 20 ಶಾಲೆಗಳಲ್ಲಿ ಇಂಧನ ದಕ್ಷತೆ ಮತ್ತು ಇಂಧನ ಉಳಿತಾಯಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು, ನಂತರ 20 ಶಾಲೆಗಳ ಇಂಧನ ಕ್ಲಬ್‌ಗಳಲ್ಲಿ ವಿವಿಧ ಕಾರ್ಯ ಚಟುವಟಿಕೆಗಳಾದ ಪ್ರಬಂಧ ಸ್ಪರ್ಧೆ, ಕ್ವಿಜ್, ಚಿತ್ರಕಲೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಬಂಧಿಸಿದ ಶಾಲೆಗಳಿಂದ ಕಾರ್ಯಕ್ರಮದ ವಿವರ, ಹಣ ಬಳಕೆ ಪ್ರಮಾಣ ಪತ್ರಗಳನ್ನು ಪಡೆದು ವರದಿಗಳನ್ನು ಕೆ.ಆರ್.ಇ.ಡಿ.ಎಲ್. ಸಂಸ್ಥೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಕಛೇರಿಗೆ ಸಲ್ಲಿಸಲಾಯಿತ್ತು.



## ಬೆಳಗಾವಿ

ಆಗಸ್ಟ್ 23ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ನಿಪ್ಪಾಣಿ ವತಿಯಿಂದ ನಗರದ ಶ್ರೀಮತಿ. ಭಾಗೀರಥಿ ಶಹಾ ಕನ್ಯಾ ಶಾಲೆಯಲ್ಲಿ ನಿಪ್ಪಾಣಿ ತಾಲ್ಲೂಕು ಮಟ್ಟದ ದೇಶ ಭಕ್ತಿ ಗೀತ ಗಾಯನ ಕಾರ್ಯಕ್ರಮ ಜರುಗಿತು. ಶ್ರೀಮತಿ ಎಂ.ಎ. ನಾಯಿಕ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಾಧ್ಯಾಪಕಿಯರಾದ ಡಾ. ಎಸ್.ಜೆ. ಪಾಟೀಲ ವಹಿಸಿದ್ದರು. ಎಸ್.ಸಿ.ಎಸ್.ಟಿ. ಸಂಘದ ಅಧ್ಯಕ್ಷರಾದ ಶ್ರೀಮತಿ ಜನವಾಡೆ, ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಉಸ್ತಾದ, ಸಿ.ಆರ್.ಪಿ.ಗಳು, ಸ್ಕೌಟರ್ ಮತ್ತು ಗೈಡರ್‌ಗಳು



ಉಪಸ್ಥಿತರಿದ್ದರು. ತಾಲ್ಲೂಕಿನಿಂದ 40 ಶಾಲೆಗಳಿಂದ 400ಕ್ಕೂ ಹೆಚ್ಚು ಸ್ಕೌಟ್ ಮತ್ತು ಗೈಡ್ ಮಕ್ಕಳು ಭಾಗವಹಿಸಿದ್ದರು. ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಸ್ಕೌಟ್ ಮತ್ತು ಗೈಡ್ ಮಕ್ಕಳಿಗೆ ಸ್ಕಾರ್ಫ್ ಓಗಲ್ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಶ್ರೀ ಎ.ಎ. ಪಾಟೀಲ ನಿರೂಪಿಸಿದರು. ಶ್ರೀ ಎಸ್.ಆರ್. ಮಗದುಮ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಟಿ.ಬಿ. ಲೋಕರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಾಮನೆ ವಂದಿಸಿದರು.

* ಆಗಸ್ಟ್ 24 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ಗೋಕಾಕ ವತಿಯಿಂದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ತಾಲ್ಲೂಕು ಮಟ್ಟದ ದೇಶ ಭಕ್ತಿ ಗೀತ ಗಾಯನ ಸ್ಪರ್ಧೆಯು ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪ ಪ್ರಾಂಶುಪಾಲರಾದ ಶ್ರೀ ಎಂ.ಬಿ. ಬಳಗಾರ ವಹಿಸಿದ್ದರು. ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಲ್.ಕೆ. ತೋರಣಗಟ್ಟಿ, ಪ್ರಭಾರಿ ಕ್ಷೇತ್ರ ಸಮನ್ವಯಾಧಿಕಾರಿ ಶ್ರೀ ಎ.ಪಿ. ದಳವಾಯಿ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯದರ್ಶಿ ಶ್ರೀ ವೈ.ಬಿ. ಲಗಮನ್ನವರ, ಕೋಶಾಧಿಕಾರಿ, ಶ್ರೀ ಜಿ.ಬಿ. ನೇಸರಗಿ, ಉಪಸ್ಥಿತರಿದ್ದರು. ಕಾರ್ಯಕ್ರಮದ ಕುರಿತು



ಪ್ರಾಸ್ತಾವಿಕವಾಗಿ ಶ್ರೀ ಡಿ.ಬಿ. ಅತ್ತಾರ ಮಾತನಾಡಿದರು. ಗೀತ ಗಾಯನ ಸ್ಪರ್ಧೆಯಲ್ಲಿ 60ಕ್ಕೂ ಸ್ಕೌಟ್ ಮತ್ತು ಗೈಡ್ ಮಕ್ಕಳು ಹಾಗೂ 30ಕ್ಕೂ ಹೆಚ್ಚು ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು.

* ಆಗಸ್ಟ್ 26 ರಂದು ಅಥಣಿ ತಾಲ್ಲೂಕಿನ ಕೊಕಟನೂರ ಗ್ರಾಮದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ರೋವರ್ ಮತ್ತು ರೇಂಜರ್ ಘಟಕಗಳ ಪ್ರಾರಂಭೋತ್ಸವ ಜರುಗಿತು. ಸ್ಕೌಟ್ ಮತ್ತು ಗೈಡ್ ಚಳುವಳಿಯ ಕುರಿತು ಶ್ರೀ ಡಿ.ಬಿ. ಅತ್ತಾರ ಮಾಹಿತಿ ನೀಡಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಬಿ.ಎಂ. ಖೋತ ವಿವಿಧ ಪರೀಕ್ಷೆಗಳು ಹಾಗೂ ಚಳುವಳಿಯಿಂದಾಗುವ ಉಪಯೋಗದ ಬಗಗೆ ತಿಳಿಸಿಕೊಟ್ಟರು. ಸ್ಕೌಟ್ ಮಾಸ್ಟರ ಶ್ರೀ ಆರ್.ಆರ್. ಅಲಕುಂಟೆ ಹಾಗೂ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಮೋಹಿತೆ ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಶ್ರೀ ಎಸ್.ಎಸ್. ಯರನಾಳ ಅಧ್ಯಕ್ಷತೆ ವಹಿಸಿದ್ದರು.

## ಬಳ್ಳಾರಿ

ಆಗಸ್ಟ್ 15 ರಂದು ಬೆಳಿಗ್ಗೆ 6 ಗಂಟೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ, ಬೆಳಿಗ್ಗೆ 7 ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮೊಹಮ್ಮದ್ ಜುಬೇರಾ ಎ.ಡಿ.ಸಿ. ಇವರ ಸಮ್ಮುಖದಲ್ಲಿ ಧ್ವಜಾರೋಹಣಾ ಕಾರ್ಯಕ್ರಮ ನೆರವೇರಿಸಿ, ನಂತರ ನೂತನ ಜಿಲ್ಲಾಡಳಿತ ಭವನಕ್ಕೆ ತೆರಳಿ 7.15 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಲಾಯಿತು. ಬೆ. 7.15 ಗಂಟೆಗೆ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ರಾಹುಲ್ ಶರಣಣ್ಣ ಸಂಕನೂರ್ ಇವರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ ಕಾರ್ಯಕ್ರಮ, 8 ಗಂಟೆಗೆ ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಧ್ವಜಾರೋಹಣ ಕಾರ್ಯಕ್ರಮ, ನಂತರ 8.45 ಗಂಟೆಗೆ ತೆಲುಗು ಚರ್ಚ್‌ನ ಪಾಸ್ಟರ್ ಅಧ್ಯಕ್ಷತೆಯಲ್ಲಿ ಧ್ವಜಾರೋಹಣಾ ಕಾರ್ಯಕ್ರಮ ನಡೆಸಲಾಯಿತು. ಪ್ರೌಢ ಶಾಲೆಯಿಂದ ಕಬ್ ತಂಡ ಮತ್ತು ಸ್ಕೌಟ್ ತಂಡ, ಶ್ರೀಮತಿ ಆನ್ನಿ ಸಂತ ಫಿಲೋಮಿನಾ ಬಾಲಕಿಯರ ಪ್ರೌಢಶಾಲೆಯಿಂದ ಒಂದು ಗೈಡ್ ತಂಡ ಸಂತ ಜೋಷೆಫ್ ಬಾಲಕಿಯರ ಪ್ರೌಢ ಶಾಲೆಯಿಂದ ಒಂದು ಗೈಡ್ ತಂಡ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀಯುತ ಬಿ. ನಾಗೇಂದ್ರರಿಂದ ಪ್ರಶಸ್ತಿ ಪತ್ರ ಮತ್ತು ಶೀಲ್ಡ್‌ನ್ನು ಪಡೆದಿರುತ್ತಾರೆ.



* ಆಗಸ್ಟ್ 23 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವ್ ಗಾಂಧಿನಗರ) ಸಿರುಗುಪ್ಪದಲ್ಲಿ ಅಜಾದಿಕಾ ಅಮೃತ ಮಹೋತ್ಸವ ಅಂಗವಾಗಿ "ಮೇರಾ ಮಟ್ಟಿ–ಮೇರಾ ದೇಶ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಜಿಲ್ಲಾ ಸಂಸ್ಥೆಯಿಂದ ಶ್ರೀಮತಿ ಮಲ್ಲೇಶ್ವರಿ ಜೂಜಾರೆ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಶ್ರೀ ಎಂ. ನಾಗರಾಜ, ಜಿಲ್ಲಾ ತರಬೇತಿ ಆಯುಕ್ತರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಛೇರಿಯಿಂದ ಶ್ರೀ ಯೋಗಾನಂದಯ್ಯ ಬಿ.ಆರ್.ಪಿ. ಶ್ರೀ ಗಜೇಂದ್ರ ಬಿ.ಆರ್.ಪಿ., ಶ್ರೀಮತಿ ರುದ್ರವೇಣಿ ಬಿ.ಆರ್.ಪಿ., ಶ್ರೀ ಮಾರುತಿ 6ನೇ ವಾರ್ಡ್, ಸಿ.ಆರ್.ಪಿ. ಶ್ರೀ ಮಂಜುನಾಥ ಅಂಗಡಿ 5ನೇ ವಾರ್ಡ್ ಸಿ.ಆರ್.ಪಿ. ಶ್ರೀಮತಿ ಎಂ.ಟಿ. ಶಾಂತ ಕೆಂಚನಗುಡ್ಡ ಸಿ.ಆರ್.ಪಿ. ಶಾಲೆಯ ಮುಖ್ಯಗುರುಗಳಾದ ಶ್ರೀ ಟಿ.ಸಿ. ಚಂದ್ರಮೌಳಿ, ಶ್ರೀಮತಿ ಜೆ. ಗೀತಾ, ರಾ.ಪ್ರಾ.ಶಾ.ಶಿ. ಜಿಲ್ಲಾ ಸಂಘದ ಸಹಕಾರ್ಯದರ್ಶಿ, ಶ್ರೀ ನಟರಾಜಸ್ವಾಮಿ, ಕಾರ್ಯದರ್ಶಿ, ಶ್ರೀ ಯೋಗಿಶ್. ಖಜಾಂಚಿ, ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಹಾಗೂ ಉಪನ್ಯಾಸಕರು ಹಾಗೂ ಮಕ್ಕಳು ಭಾಗವಹಿಸಿದ್ದರು. ಹಲವು ಹಳ್ಳಿಗಳಿಂದ ತಂದಂತಹ ಮಣ್ಣನ್ನು ಪೂಜಿಸಿ ಮಡಿಕೆಯಲ್ಲಿ ಹಾಕಿ ಶ್ರೀ ಗುರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಹಸ್ತಾಂತರ ಮಾಡಲಾಯಿತು.




## ಬೆಂಗಳೂರು ದಕ್ಷಿಣ

**One Scout Troop and Two Guide Companies were inaugurated at HAL East Primary School on Thursday the 31st August 23. Sri P. Nandakumar Ex. Rover Scout leader, was the chief Guest. Smt. Elzebeth mala, Headmistress presided over the function. Sri D. Shivappa, Asst Secretary WFLA was also present. The Services of HAL Rover Scouts was utilised by the SC/ST Employees and Officers Association on Saturday the 19th August 2023.**



* ಆಗಸ್ಟ್ 27 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿರುವ ಶ್ರೀ ಕೊಂಡಜ್ಜಿ ಬಸಪ್ಪ ಸಂಭಾಗಣದಲ್ಲಿ ಗೀತ ಗಾಯನ ಸ್ಪರ್ಧೆ ಆಯೋಜನೆ ಮಾಡಲಾಯಿತು. ಬಹುಮಾನ ವಿತರಣಾ ಸಮಾರಂಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ರವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಪಳನಿ, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಮಧುಸೂದನ್, ಜಿಲ್ಲಾ ಖಂಜಾಚಿ ಹಾಗೂ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು, ಪೋಷಕರು, ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್, ಸೇವಾ ರೋವರ್ಸ್-ರೇಂಜರ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



* ಆಗಸ್ಟ್ 24 ರಂದು ಹಲಸೂರು ಸ್ಥಳೀಯ ಸಂಸ್ಥೆಯ ವತಿಯಿಂದ ಸ್ಥಳೀಯ ಮಟ್ಟದ ಗೀತ ಗಾಯನ ಸ್ಪರ್ಧೆಯನ್ನು ಬಾಲ್ಡ್‌ವಿನ್ ಬಾಯ್ಸ್ ಹೈಸ್ಕೂಲ್‌ನಲ್ಲಿ ಆಯೋಜನೆ ಮಾಡಲಾಯಿತು. ಶ್ರೀಮತಿ ಲೀನಾ ಡ್ಯಾನಿಯಲ್, ಪ್ರಾಂಶುಪಾಲರು ಬಾಲ್ಡ್‌ವಿನ್ ಬಾಯ್ಸ್ ಹೈಸ್ಕೂಲ್, ಪಾಸ್ಟರ್ ಕೆ.ಕೆ. ಡ್ಯಾನಿಯಲ್, ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಸ್ಪರ್ಧೆಯಲ್ಲಿ 6 ಶಾಲೆಯಿಂದ 106 ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್ ಭಾಗವಹಿಸಿದರು.

* ಆಗಸ್ಟ್ 26 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಆಯೋಜಿಸಿದ್ದ "ನಮ್ಮ ಮಣ್ಣು ನಮ್ಮ ದೇಶ" ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ಮಣ್ಣು ಮತ್ತು ಕಳಸವನ್ನು ರಾಜ್ಯ ಮುಖ್ಯ ಆಯುಕ್ತರಿಗೆ ಹಸ್ತಾಂತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ದಳನಾಯಕರುಗಳು ಹಾಗೂ ಕಬ್ಸ್-ಬುಲ್‌ಬುಲ್, ಸ್ಕೌಟ್-ಗೈಡ್ಸ್ ಭಾಗವಹಿಸಿದ್ದರು.



* ಜಿಲ್ಲಾ ಸಂಸ್ಥೆ ವತಿಯಿಂದ ಆಗಸ್ಟ್ 29 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ದಿ|| ಕೆ.ಎಸ್. ಶಿವಕುಮಾರ್, ಎ.ಎಲ್.ಟಿ(ಸ್ಕೌ)



ರವರ ಶ್ರದ್ಧಾಂಜಲಿ ಸಭೆಯನ್ನು ರಾಜ್ಯ ಕೇಂದ್ರ ಕಛೇರಿಯ ಆವರಣದಲ್ಲಿ ಆಯೋಜನೆಯನ್ನು ಮಾಡಲಾಯಿತು. ಕಾರ್ಯಕ್ರಮವು ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಕೆ.ಎಸ್. ಶಿವಕುಮಾರ್ ಎ.ಎಲ್.ಟಿ.(ಸ್ಕೌ) ರವರ ಮಕ್ಕಳಾದ ಕು|| ಸ್ವಾತಿ, ಶ್ರೀ ಚೇತನ್, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಎಂ.ಎ. ಚೆಲ್ಲಯ್ಯರವರು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಎ.ಎಸ್. ಮಧುಸೂದನ್, ಜಿಲ್ಲಾ ಖಂಜಾಚಿಗಳು ಹಾಗೂ ಅಂತರಾಷ್ಟ್ರೀಯ ಆಯುಕ್ತರು ಭಾಗವಹಿಸಿದ್ದರು.

* ಸೆಪ್ಟೆಂಬರ್ 05 ರಂದು ಸ್ಥಳಿಯ ಸಂಸ್ಥೆಯ ಶಾಲೆಯ ಎಲ್ಲಾ ದಳಗಳ ಮಟ್ಟದಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ ಗುರುವಂದನಾ ಕಾರ್ಯಕ್ರಮವನ್ನು ಆಚರಿಸಲಾಯಿತ್ತು.

* ಸೆಪ್ಟೆಂಬರ್ 09 ಮತ್ತು 10 ರಂದು ವಿಜಯ ನಗರ ಸ್ಥಳಿಯ ಸಂಸ್ಥೆಯ 2023-24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಮಹನ್ ಅಂಜನಾದ್ರಿ ಶಾಲೆಯಲ್ಲಿ ಆಯೋಜಿಲಾಯಿತು. ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಎ.ಎಲ್.ಟಿ.(ಗೈ) ಗೈಡ್ ವಿಭಾಗಕ್ಕೆ, ಶ್ರೀ ಜಿ. ಸತೀಶ್, ಹೆಚ್.ಡಬ್ಲ್ಯೂ.ಬಿ.(ಸ್ಕೌ) ಸ್ಕೌಟ್ ವಿಭಾಗಕ್ಕೆ, ಶ್ರೀ ಪ್ರಶಾಂತ್, ಕಬ್ ವಿಭಾಗಕ್ಕೆ, ಶ್ರೀಮತಿ ವಿದ್ಯಾ, ಬುಲ್‌ಬುಲ್ ವಿಭಾಗಕ್ಕೆ ಪರಿವೀಕ್ಷರಾಗಿದ್ದರು. ಪರೀಕ್ಷಾ ಶಿಬಿರದ ಮಕ್ತಾಯ ಸಮಾರಂಭಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ), ಅಧಿಪತಿ ಕುಂಬಾರ್ ಮಹನ್ ಅಂಜನಾದ್ರಿ ಶಾಲೆಯ ಪ್ರಾಂಶುಪಾಲರು, ಶ್ರೀಮತಿ ದ್ರಾಕ್ಷಾಯಣಿ, ಜಿಲ್ಲಾ ಪದಕ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದರು. ಕಾರ್ಯಕ್ರಮದಲ್ಲಿ ಶ್ರೀ ಸಿದ್ದಗಂಗಯ್ಯ, ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳು, ಸ್ಥಳಿಯ ಸಂಸ್ಥೆಯ ಪದಾಧಿಕಾರಿಗಳು, ದಳ ನಾಯುಕರುಗಳು ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು. ಪರೀಕ್ಷಾ ಶಿಬಿರದಲ್ಲಿ 279 ಸ್ಕೌಟ್ಸ್, 182 ಗೈಡ್ಸ್, 79 ಕಬ್, 68 ಬುಲ್‌ಬುಲ್ ಒಟ್ಟು 608 ಶಿಬಿರಾರ್ಥಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 09 ಮತ್ತು 10 ರಂದು ಬಸವನಗುಡಿ ಸ್ಥಳಿಯ ಸಂಸ್ಥೆಯ 2023-24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಕುವೆಂಪು ಸಭಾಂಗಣದಲ್ಲಿ ಆಯೋಜಿಲಾಯಿತು. ಶ್ರೀಮತಿ ಅರುಣ, ಪ್ರೀ.ಎ.ಎಲ್.ಟಿ(ಗೈ) ಗೈಡ್ ವಿಭಾಗಕ್ಕೆ, ಶ್ರೀ ಎನ್. ಶಂಕರ್, ಹೆಚ್.ಡಬ್ಲ್ಯೂ.ಬಿ(ಸ್ಕೌ) ಸ್ಕೌಟ್ ವಿಭಾಗಕ್ಕೆ, ಪರಿವೀಕ್ಷರಾಗಿದರು. ಪರೀಕ್ಷಾ ಶಿಬಿರದ ಮಕ್ತಾಯ ಸಮಾರಂಭಕ್ಕೆ ಶ್ರೀ ಶ್ರೀನಿವಾಸ್ ರೆಡ್ಡಿ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಶ್ರೀ ಜ್ಞಾನ ಪ್ರಕಾಶ್, ಸ್ಥಳಿಯ ಸಂಸ್ಥೆಯ ಉಪಧ್ಯಾಕ್ಷರು, ಶ್ರೀ ಬಿ.ವಿ. ಶೇಖರ್, ಸ್ಥಳಿಯ ಸಂಸ್ಥೆಯ ಸಹಾಯಕ





ಜಿಲ್ಲಾ ಆಯುಕ್ತರು (ಸ್ಕೌ) ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಐಶ್ವರ್ಯ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ದಳ ನಾಯಕರುಗಳು ಸ್ಕೌಟ್ಸ್-ಗೈಡ್ಸ್ ಗಳು ಭಾಗವಹಿಸಿದರು. ಪರೀಕ್ಷಾ ಶಿಬಿರದಲ್ಲಿ 113 ಸ್ಕೌಟ್ಸ್, 69 ಗೈಡ್ಸ್, ಒಟ್ಟು 183 ಶಿಬಿರಾರ್ಥಿಗಳು ಭಾಗವಹಿಸಿದರು.

* ಸೆಪ್ಟೆಂಬರ್ 09 ಮತ್ತು 10 ರಂದು ಜಯನಗರ ಸ್ಥಳೀಯ ಸಂಸ್ಥೆಯ 2023-24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಬೆಂಗಳೂರು ಇಂಟರ್ ನ್ಯಾಷನಲ್ ಅಕಾಡೆಮಿ ಜಯನಗರ ಶಾಖೆಯ ಶಾಲೆಯಲ್ಲಿ ಆಯೋಜಿಲಾಯಿತು. ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ(ಸ್ಕೌ) ಸ್ಕೌಟ್ಸ್ ವಿಭಾಗಕ್ಕೆ, ಶ್ರೀಮತಿ ಜಯಲಕ್ಷ್ಮಿ, ಎ.ಎಲ್.ಟಿ(ಗೈ) ಗೈಡ್ ವಿಭಾಗಕ್ಕೆ, ಶ್ರೀ ಪ್ರಭು, ಕಬ್ ವಿಭಾಗಕ್ಕೆ, ಪರಿವೀಕ್ಷರಾಗಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಆರೋಗ್ಯ ರಾಜ್, ಸಹಾಯಕ ಜಿಲ್ಲಾ ಆಯುಕ್ತರು, ಶ್ರೀ ರಿಯಾಜ಼ ಪಾಷ, ಎ.ಎಲ್.ಟಿ(ಸ್ಕೌ) ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ದಳ ನಾಯಕರುಗಳು ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್‌ಗಳು ಭಾಗವಹಿಸಿದರು. ಪರೀಕ್ಷಾ ಶಿಬಿರದಲ್ಲಿ 51 ಸ್ಕೌಟ್ಸ್, 28 ಗೈಡ್ಸ್, 13 ಕಬ್, 09 ಬುಲ್ ಬುಲ್ ಒಟ್ಟು 101 ಶಿಬಿರಾರ್ಥಿಗಳು ಭಾಗವಹಿಸಿದರು.

* ಸೆಪ್ಟೆಂಬರ್ 16 ಮತ್ತು 17 ರಂದು ಹಲಸೂರು ಸ್ಥಳಿಯ ಸಂಸ್ಥೆಯ 2023-24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಕೆಥಾಡ್ರಿಲ್ ಶಾಲೆಯಲ್ಲಿ ಆಯೋಜಿಲಾಯಿತು. ಶ್ರೀ ಎಡ್‌ವಿನ್, ಸ್ಕೌಟ್ ವಿಭಾಗಕ್ಕೆ, ಶ್ರೀಮತಿ ವಿಕ್ಟೋರಿಯಾ ಅಮಲಾ ರಾಣಿ, ಎ.ಎಲ್.ಟಿ(ಗೈ) ಗೈಡ್ ವಿಭಾಗಕ್ಕೆ, ಪರಿವೀಕ್ಷರಾಗಿದರು. ಪರೀಕ್ಷಾ ಶಿಬಿರದ ಮುಕ್ತಾಯ ಸಮಾರಂಭಕ್ಕೆ ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ, ಶ್ರೀಮತಿ ಇರುಧಯ ರಾಣಿ, ಜಿಲ್ಲಾ ಸಹಾಯಕ ಆಯುಕ್ತರು(ಗೈ), ಸ್ಥಳಿಯ ಸಂಸ್ಥೆಯ ಪದಾಧಿಕಾರಿಗಳು, ದಳ ನಾಯಕರುಗಳು ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದರು. ಪರೀಕ್ಷಾ ಶಿಬಿರದಲ್ಲಿ 60 ಸ್ಕೌಟ್ಸ್, 84 ಗೈಡ್ಸ್, ಒಟ್ಟು 144 ಶಿಬಿರಾರ್ಥಿಗಳು ಭಾಗವಹಿಸಿದರು.

* ಸೆಪ್ಟೆಂಬರ್ 16 ಮತ್ತು 17 ರಂದು ವಿಲ್ಸನ್ ಗಾರ್ಡನ್ ಸ್ಥಳಿಯ ಸಂಸ್ಥೆಯ 2023-24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಚಿನ್ಮಯ ವಿದ್ಯಾಲಯದಲ್ಲಿ ಆಯೋಜಿಲಾಯಿತು. ಶ್ರೀಮತಿ ಶೀಲಾ, ಜಿಲ್ಲಾ ಸಹಾಯಕ ಆಯುಕ್ತರು(ಗೈ) ಉದ್ಘಾಟಿಸಿದರು. ಶ್ರೀ ನಾರಾಯಣ ಶೆಟ್ಟಿ, ಹೆಚ್.ಡಬ್ಲ್ಯೂ.ಬಿ(ಸ್ಕೌ) ಸ್ಕೌಟ್ ವಿಭಾಗಕ್ಕೆ, ಶ್ರೀಮತಿ ಗಾಯತ್ರಿ ಜಿ., ಎ.ಎಲ್.ಟಿ(ಗೈ), ಏಂಜಲ್ ಬೆನೆಟಿಕ್ ಬುಲ್‌ಬುಲ್ ವಿಭಾಗಕ್ಕೆ ಪರಿವೀಕ್ಷರಾಗಿದರು. ಶ್ರೀಮತಿ ಅಮಲಪೂರ್ವ ಮೇರಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ದಳ ನಾಯಕರುಗಳು ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್‌ಗಳು ಭಾಗವಹಿಸಿದರು. ಪರೀಕ್ಷಾ ಶಿಬಿರದಲ್ಲಿ 82 ಸ್ಕೌಟ್ಸ್, 106 ಗೈಡ್ಸ್, 58 ಕಬ್ಸ್, 38 ಬುಲ್‌ಬುಲ್ಸ್ ಒಟ್ಟು 284 ಶಿಬಿರಾರ್ಥಿಗಳು ಭಾಗವಹಿಸಿದರು.

* ಜಿಲ್ಲೆಯ ದಳಗಳ ಮಟ್ಟದಲ್ಲಿ ಸೆಪ್ಟೆಂಬರ್ ಮಾಹೆಯಲ್ಲಿ ಗಣೇಶ ಚತುರ್ಥಿ ಅಂಗವಾಗಿ ಪರಿಸರ ಸ್ನೇಹಿ ಗಣಪತಿ ಮಾಡುವ ಮುಖಾಂತರ ಎಲ್ಲರಿಗೂ ಜಾಗೃತಿ ಮೂಡಿಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು.

## ಬೆಂಗಳೂರು ಉತ್ತರ

ಬಾಣಸವಾಡಿ ಸ್ಥಳೀಯ ಸಂಸ್ಥೆ ವತಿಯಿಂದ ಆಗಸ್ಟ್ 10 ರಂದು ಗೀತ ಗಾಯನ ಸ್ಪರ್ಧೆಯನ್ನು ಮಾರುತಿ ವಿದ್ಯಾಲಯ ಇಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಬಹುಮಾನವನ್ನು ಸ್ಥಳೀಯ ಸಂಸ್ಥೆ ಅಧ್ಯಕ್ಷರು ಹಂಚಿದರು. ಬಾಣಸವಾಡಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವರ್ದಮಾನ್ ಇವರು ಕಾಯಕ್ರಮವನ್ನು ಸಂಘಟಿಸಿದರು. 160 ಸ್ಕೌಟ್ಸ್-ಗೈಡ್ಸ್ ಕಬ್-ಬುಲ್‌ಬುಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಹರ್‌ಘರ್ ತಿರಂಗ ಈ ಕಾರ್ಯಕ್ರಮದ ಅಡಿಯಲ್ಲಿ ಬೆಂಗಳೂರು ನಗರ ಪ್ರದೇಶದ ಪ್ರತಿಮೆ ಸ್ವಚ್ಛತಾ ಕಾರ್ಯಕ್ರಮವನ್ನು ಆಗಸ್ಟ್ 14 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಿಸಲಾಯಿತು. ಶೇಷಾದ್ರಿಪುರಂ ಬಳಿ



ಇರುವ ನೆಹರು ಪ್ರತಿಮೆಯನ್ನು ಸ್ವಚ್ಛಗೊಳಿಸಿದರು. ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಆಗಮಿಸಿ ಭಾಗವಹಿಸಿದವರನ್ನು ಶ್ಲಾಘಿಸಿದರು. ನಂತರ ಎಲ್ಲರೂ ಕುವೆಂಪು ಅವರ ಪ್ರತಿಮೆಯತ್ತ ಹೆಜ್ಜೆ ಹಾಕಿದರು. ಗಾಂಧಿ ಪ್ರತಿಮೆಯನ್ನು ಸ್ವಚ್ಛಗೊಳಿಸಿದ ನಂತರ ಧ್ವಜಗಳನ್ನು ಹಿಡಿದುಕೊಂಡು ರಾಜ್ಯ ಕೇಂದ್ರ ಕಚೇರಿಗೆ ಹಿಂತಿರುಗಿದರು.

* ಮಲ್ಲೇಶ್ವರ ಸ್ಥಳೀಯ ಸಂಸ್ಥೆ ವತಿಯಿಂದ ಆಗಸ್ಟ್ 08 ಹಾಗೂ 09 ರಂದು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಹಾಗೂ ತೃತೀಯ ಸೋಪಾನ ಪೂರ್ವಸಿದ್ದತಾ ಪರೀಕ್ಷೆಯನ್ನು ಚಾಮುಂಡಿ ಸ್ಕೌಟ್ಸ್–ಗೈಡ್ಸ್ ಮುಕ್ತದಳದ ಆವರಣದಲ್ಲಿ ಆಯೋಜಿಸಲಾಯಿತು. ಚಾಮುಂಡಿ ಮುಕ್ತದಳದ ನಾಯಕರಾದ ಶ್ರೀ ನರಸಿಂಹಮೂರ್ತಿ ಶಿಬಿರವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಮುಖ್ಯ ಅತಿಥಿಯಾಗಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾ ಇವರು ಭಾಗವಹಿಸಿ ಮಕ್ಕಳೊಂದಿಗೆ ಸಂವಾದ ಮಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಕಮಲಾಕ್ಷಿ ಹೆಗ್ಡೆ ಇವರು ಶಿಬಿರದಲ್ಲಿ ಸಹಕರಿಸಿದರು. 225 ಸ್ಕೌಟ್ಸ್–ಗೈಡ್ಸ್ ಭಾಗವಹಿಸಿದ್ದರು. ಶ್ರೀಮತಿ ಜ್ಯೋತಿ ರಂಗನಾಥ್ ಶಿಬಿರವನ್ನು ಸಂಘಟಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ಹಾಗು ರಾಜಾಜಿನಗರ ಸ್ಥಳೀಯ ಸಂಸ್ಥೆ ವತಿಯಿಂದ ಆಗಸ್ಟ್ 11 ರಂದು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ವಿದ್ಯಾಮಾನ್ಯ ವಿದ್ಯಾ ಕೇಂದ್ರ ಸಂಸ್ಥೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲಾ ಮುಖ್ಯಸ್ಥರಾದ ಶ್ರೀ ಭರತ್ ಇವರು ನೇವೆರಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದ ಇವರು ಶುಭ ಹಾರೈಸಿದರು. ಎಲ್ಲರನ್ನು ಸ್ಥಳೀಯ ಸಂಸ್ಥೆ ಖಜಾಂಜಿ ಶ್ರೀಮತಿ ಜ್ಯೋತಿ ಇವರು ಸ್ವಾಗತಿಸಿದರು. ಶ್ರೀಮತಿ ಮಮತ, ಸ್ಥಳೀಯ ಸಂಸ್ಥೆ ಜಂಟಿ ಕಾರ್ಯದರ್ಶಿ, ಕಾರ್ಯಕ್ರಮ ನಿರೂಪಿಸಿದರು. ಸ್ಕೌಟ್ಸ್ ವಿಭಾಗಕ್ಕೆ ನಾಯಕರಾಗಿ ಶ್ರೀಮತಿ ಜ್ಯೋತಿ ಹಾಗೂ ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಅಮೃತ ಇವರು ಸಹಕರಿಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಶಿಧರ್ ಇವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಯೋಗಿಶ್ ಇವರು ಸಂಘಟಿಸಿದರು. 225 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಬೆಂಗಳೂರು ಉತ್ತರ ಜಿಲ್ಲೆ ಹಾಗು ರಾಜಾಜಿನಗರ ಸ್ಥಳೀಯ ಸಂಸ್ಥೆ ವತಿಯಿಂದ ಆಗಸ್ಟ್ 13 ರಂದು ಗೀತ ಗಾಯನ ಕಾಯಕ್ರಮವನ್ನು ವಿದ್ಯಾಮಾನ್ಯ ವಿದ್ಯಾ ಕೇಂದ್ರ ಸಂಸ್ಥೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲಾ ಮುಖ್ಯಸ್ಥರಾದ ಶ್ರೀ ಭರತ್ ಇವರು ನೇರವೆರಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದ ಇವರು ಶುಭ ಹಾರೈಸಿದರು. ಎಲ್ಲರನ್ನು ಸ್ಥಳೀಯ ಸಂಸ್ಥೆ ಖಜಾಂಜಿ



ಶ್ರೀಮತಿ ಜ್ಯೋತಿ ಇವರು ಸ್ವಾಗತಿಸಿದರು. ಶ್ರೀಮತಿ ಮಮತ, ಸ್ಥಳೀಯ ಸಂಸ್ಥೆ ಜಂಟಿ ಕಾರ್ಯದರ್ಶಿ, ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಶಿಧರ್ ಇವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಯೋಗಿಶ್ ಇವರು ಸಂಘಟಿಸಿದರು. 160 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಬೆಂಗಳೂರು ಉತ್ತರ ಜಿಲ್ಲೆ ರಾಜಾಜಿನಗರ ಸ್ಥಳೀಯ ಸಂಸ್ಥೆ ವತಿಯಿಂದ ಆಗಸ್ಟ್ 12 ರಂದು ದ್ವಿತೀಯ ಚರಣ್ ರಜತಗಿರಿ ಪರೀಕ್ಷಾ ಶಿಬಿರವನ್ನು ಕಡಂಬಿ ಸ್ಕೂಲ್ ಇಲ್ಲಿ ನಡೆಸಲಾಯಿತು. ಮುಖ್ಯ ಅತಿಥಿಯಾಗಿ ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್ ಭಾಗವಹಿಸಿ ಸ್ಕೌಟ್ಸ್–ಗೈಡ್ಸ್ ಬಗ್ಗೆ ಮಾಹಿತಿ ನೀಡಿದರು. ಎಲ್ಲರನ್ನು ಸ್ಥಳೀಯ ಸಂಸ್ಥೆ ಖಜಾಂಜಿ ಶ್ರೀಮತಿ ಜ್ಯೋತಿ ಇವರು ಸ್ವಾಗತಿಸಿದರು. ಶ್ರೀಮತಿ ಮಮತ, ಸ್ಥಳೀಯ ಸಂಸ್ಥೆ ಜಂಟಿ ಕಾರ್ಯದರ್ಶಿ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಶಿಧರ್ ಇವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಯೋಗಿಶ್ ಇವರು ಸಂಘಟಿಸಿದರು. 160 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜಿಲ್ಲಾ ಸಂಸ್ಥೆ ವತಿಯಿಂದ "ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 13ನೇ ತಿಂಗಳ ಕಾರ್ಯಕ್ರಮವು ಜುಲೈ 31 ರಂದು ಗಂಟಿಗಾನಹಳ್ಳಿ, ಯಲಹಂಕ, ಬೆಂಗಳೂರು ಇಲ್ಲಿ ನಡೆಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು ಹಾಗು ಪಿ.ಡಿ.ಓ.ರವರು ತಮ್ಮ ಸಹಕಾರ ನೀಡಿದರು ಹಾಗು ನಮ್ಮ ಜತೆ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 12 ರೋವರ್ಸ್– ರೇಂಜರ್ಸ್ ಭಾಗವಹಿಸಿದ್ದರು.

* ಸ್ಥಳೀಯ ಸಂಸ್ಥೆ ಜಾಲಹಳ್ಳಿ ಇಲ್ಲಿನ ಎಲ್.ಎಸ್.ವಿ. ಪಬ್ಲಿಕ್ ಶಾಲೆಯಲ್ಲಿ ಹೊಸ ಘಟಕದ ಉದ್ಘಾಟನೆಯನ್ನು ಆಗಸ್ಟ್ 12 ರಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ನೇರವೇರಿಸಿದರು. ಶಾಲಾ ಆಡಳಿತಾಧಿಕಾರಿಗಳು ಶ್ರೀಮತಿ ರೂಪ ಹಾಗೂ ಯಶವಂತರೆಡ್ಡಿ ಇವರು ಎಲ್ಲರನ್ನು ಸ್ವಾಗತಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಚಿತ್ರ ಇವರು ಪ್ರಾಸ್ತಾವಿಕ ನುಡಿ ನುಡಿದರು. ಶ್ರೀಮತಿ ಜ್ಯೋತಿರಂಗನಾಥ್ ಇವರು ಸ್ಕೌಟ್ಸ್–ಗೈಡ್ಸ್ ಮಾಹಿತಿ ನೀಡಿದರು. ಸ್ಥಳೀಯ ಸಂಸ್ಥೆ ಜಾಲಹಳ್ಳಿ ಇದರ ಖಜಾಂಜಿಯಾದ ಶ್ರೀ ಸುಭಾಷ್,



ಶ್ರೀ ರವಿಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಾಗೂ ಸ್ಥಳೀಯ ಕಾರ್ಯದರ್ಶಿಯಾದ ಶ್ರೀ ಶಾಂತಕುಮಾರ್ ಕಾರ್ಯಕ್ರಮ ಸಂಘಟಿಸಿದರು.

## ಬೆಂಗಳೂರು ಪೂರ್ವ

ಆನೇಕಲ್ ತಾಲ್ಲೂಕಿನ ಬೊಮ್ಮಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಆವರಣದಲ್ಲಿ ಜಿಲ್ಲಾ ಸಂಸ್ಥೆಯ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ದೇಶಭಕ್ತಿ ಗೀತೆಗಳ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜಾನಪದ ತಜ್ಞ ಮತ್ತು ಸಾಹಿತಿ ನಾಡೋಜ ಡಾ. ಗೊ.ರು. ಚನ್ನಬಸಪ್ಪರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. "ದೇಶಭಕ್ತಿ ಗೀತೆಯನ್ನು ಹಾಡುವುದರಿಂದ ದೇಶದ ಬಗ್ಗೆ ಅಭಿಮಾನ ಮೂಡುತ್ತದೆ, ಭಾವ ಗೀತೆ ಹಾಡುವುದರಿಂದ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡುತ್ತದೆ, ಜಾನಪದ ಗೀತೆ ಹಾಡುವುದರಿಂದ ನಮ್ಮ ಗ್ರಾಮೀಣ ಸಂಸ್ಕೃತಿಯ ಬಗ್ಗೆ ನೆನಪಾಗುತ್ತದೆ" ಎಂದು ನುಡಿದರು. ಇದೇ ಸಂದರ್ಭದಲ್ಲಿ ಭಾರತ ಸಂವಿಧಾನದ ಪೀಠಿಕೆ ಓದಿ ಬೋಧಿಸಲಾಯಿತು. ಕಬ್, ಬುಲ್‌ಬುಲ್, ಸ್ಕೌಟ್, ಗೈಡ್ ಹಾಗೂ ಶಿಕ್ಷಕರಿಗೆ ದೇಶಭಕ್ತಿ ಗೀತೆ ರೋವರ್, ರೇಂಜರ್ ಗಳಿಗೆ ಜಾನಪದ ಗೀತೆಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಚನ್ನಸ್ವಾಮಿ ರೆಡ್ಡಿರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತೆ ಶ್ರೀಮತಿ ಮುಕ್ತ ಕಾಗಲೆ, ಗೌರಮ್ಮ ತಿಮ್ಮಾರೆಡ್ಡಿ ಫೌಂಡೇಷನ್ ಅಧ್ಯಕ್ಷ ಶ್ರೀ ಬಿ.ಟಿ. ನಾಗರಾಜ ರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಜೆ.ಎಂ. ಜಯಲಕ್ಷ್ಮಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ. ಚಂದ್ರಶೇಖರ್, ದೈಹಿಕ ಶಿಕ್ಷಣ ಶಿಕ್ಷರ ಸಂಘದ ಅಧ್ಯಕ್ಷ ಶ್ರೀ ಎಂ. ಗೋಪಾಲ್, ಶಿಕ್ಷಣ ಸಂಯೋಜಕ ಶ್ರೀ ದತ್ತಗುರು ಮೊದಲಾದವರು ಉಪಸ್ಥಿತರಿದ್ದರು.



* ಸರ್ಜಾಪುರದ ಸೆಂಟ್ ಫಿಲೋಮಿನಾಸ್ ಶಾಲೆಯ ಆವರಣದಲ್ಲಿ ಸ್ಕೌಟ್ ಗೈಡ್ ವಿದ್ಯಾರ್ಥಿಗಳು ಮಕ್ಕಳ ಸಂತೆ ಮತ್ತು ಗ್ಯಾಡ್ಜೆಕ್ಟ್ ಮೇಳ ಹಮ್ಮಿಕೊಂಡಿದ್ದರು. ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಚೆನ್ನಸ್ವಾಮಿರೆಡ್ಡಿರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಚಂದ್ರಯ್ಯ ನಾಯ್ಡು, ಪ್ರಾಂಶುಪಾಲೆ ಶ್ರೀಮತಿ ಎಸ್.ಆರ್. ಮಮತಾ, ಸ್ಥಳೀಯ ಸಂಸ್ಥೆ ಅಧ್ಯಕ್ಷ ಶ್ರೀ ವಿ.ಮಂಜೇಗೌಡ, ಕಾರ್ಯದರ್ಶಿ ಶ್ರೀ ರಾಮಕೃಷ್ಣಯ್ಯ, ಉಪಪ್ರಾಂಶುಪಾಲೆ ಶ್ರೀಮತಿ ಬಿ.ಎಸ್. ಪದ್ಮಜಾ, ಗೈಡ್ ಕ್ಯಾಪ್ಟನ್ ಶ್ರೀಮತಿ ಧನಲಕ್ಷ್ಮಿ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶಿಬಿರ ಜೀವನಕ್ಕೆ ಪೂರಕವಾದ ವಿವಿಧ ಗ್ಯಾಡ್ಜೆಕ್ಟ್‌ಗಳು ಹಾಗೂ ಪೂರ್ವಜರು ಕೃಷಿ, ವಾಸ ಹಾಗೂ ಜೀವನಕ್ಕಾಗಿ ಬಳಸುತ್ತಿದ್ದ ಅನೇಕ ಪರಿಕರಗಳು ಮತ್ತು ವಿವಿಧ ಪ್ರಾಂತ್ಯಗಳ ಸಾಂಸ್ಕೃತಿಕ ಉಡುಗೆ ತೊಡುಗೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಸ್ಕೌಟ್, ಗೈಡ್, ಕಬ್, ಬುಲ್‌ಬುಲ್ ಮಕ್ಕಳು ಆಯೋಜಿಸಿದ್ದ ಮಕ್ಕಳ ಸಂತೆ ಅತ್ಯಂತ ಆಕರ್ಷಣೀಯವಾಗಿದ್ದು ಪೋಷಕರು ಸೊಪ್ಪು, ತರಕಾರಿ ಹಾಗೂ ಕರಕುಶಲ ವಸ್ತುಗಳನ್ನು ಮುಗಿಬಿದ್ದು ಖರೀದಿಸುತ್ತಿದ್ದ ದೃಷ್ಯ ಕಂಡುಬಂತು.



## ಬೀದರ್

ಆಗಸ್ಟ್ 15 ರಂದು ನಡೆದ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತದಿಂದ ಹಮ್ಮಿಕೊಂಡ ಪಥಸಂಚಲನದಲ್ಲಿ ನಗರದ ಸಿದ್ಧಾರ್ಥ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರೋವರ್ ಮತ್ತು ರೇಂಜರ್ ತಂಡ, ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಮತ್ತು ಶ್ರೀ ಸ್ವಾಮಿ ನರೇಂದ್ರ ಪದವಿ ಪೂರ್ವ ಕಾಲೇಜಿನ ರೋವರ್ಸ್ ತಂಡ ಹಾಗೂ ಗುರುನಾನಕ್ ಪಬ್ಲಿಕ್ ಸ್ಕೂಲ್‌ನ ಸ್ಕೌಟ್ ತಂಡದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ, ಸಚಿವರು, ಅರಣ್ಯ, ಜೈವಿಕ ಮತ್ತು ಪರಿಸರದ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ ಇವರು ಹಾಗೂ ಶ್ರೀ ರಹೀಂ ಖಾನ್, ಸಚಿವರು ಪೌರಾಡಳಿತ ಮತ್ತು ಹಜ್ ಇಲಾಖೆ ಕರ್ನಾಟಕ ಸರ್ಕಾರ ಇವರು ರೋವರ್ ಮತ್ತು ರೇಂಜರ್ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಿ ಶುಭ ಹಾರೈಸಿದರು. ಅದೇ ರೀತಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನೆಹರು ಕ್ರೀಡಾಂಗಣದ ಸಮಾರಂಭದಲ್ಲಿ, ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಗೋವಿಂದರೆಡ್ಡಿ, ಬೀದರ ದಕ್ಷಿಣ ಕ್ಷೇತ್ರದ ಶಾಸಕರಾದ ಶ್ರೀ ಶೈಲೇಂದ್ರ ಬೆಲ್ದಾಳೆ, ಬೀದರ ನಗರದ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರವಿಂದ ಅರಳಿ, ಬೀದರ ಜಿಲ್ಲೆಯ ಶ್ರೀ ಎಸ್.ಪಿ. ಚನ್ನಬಸವಣ್ಣಾ ಲಂಗೋಟಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ





ಶ್ರೀಮತಿ ಶಿಲ್ಪಾ ಎಂ., ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿದೇಶಕ ಶ್ರೀ ಸಲೀಂ ಪಾಷಾ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಅಖಿಲಾಂಡೇಶ್ವರಿ ಸಿದ್ಧಾರ್ಥ, ಜ್ಞಾನ ಸುಧಾ ಪಿ.ಯು. ಕಾಲೇಜಿನ ಬೀದರ ಜಿಲ್ಲೆಯ ಉಪನಿರ್ದೇಶಕ ಶ್ರೀ ಚಂದ್ರಕಾಂತ ಶಾಹಾಬಾದಕರ ಉಪಸ್ಥಿತರಿದ್ದರು, ಸಿದ್ಧಾರ್ಥ ಪದವಿ ಪೂರ್ವ ಕಾಲೇಜಿನ ಶ್ರೀ ಎಸ್. ಪ್ರಭು, ಜಿಲ್ಲಾ ಸಂಘಟಕರಾದ ಶ್ರೀಮತಿ ನಾಗರತ್ನ ಪಾಟೀಲ, ರೋವರ್ – ರೇಂಜರ್‌ದ ಪದವಿ ಪೂರ್ವ ಶಿಕ್ಷಣ ಇಲಾಖೆ ಬೀದರ ಜಿಲ್ಲೆಯ ನೋಡಲ್ ಅಧಿಕಾರಿಯಾದ ಶ್ರೀ ಚಂದ್ರಕಾಂತ ಗಂಗಶೆಟ್ಟಿ ಹಾಗೂ ರೋವರ್ ರೇಂಜರ್ ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಬಸವರಾಜ ಬರಶೆಟ್ಟಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

* ಪದವಿಪೂರ್ವ ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಸಂಸ್ಥೆ ಬೀದರ್ ಸಂಯುಕ್ತ ಆಶ್ರಯದಲ್ಲಿ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರ ಸೆಪ್ಟೆಂಬರ್ 11 ರಂದು ಬೀದರ್ ಜಿಲ್ಲೆಯ ಆರ್.ಆರ್.ಕೆ. ಪದವಿಪೂರ್ವ ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ ಗುರುದೇವಿ ಬೆಹನಜೀ ಅವರು "ಆಧ್ಯಾತ್ಮದಿಂದ ಏಕಾಗ್ರತೆ ಪರಿವರ್ತನೆ ಮತ್ತು ಸಬಲೀಕರಣ ಸಾಧ್ಯ" ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು ಅವರು ರೋವರ್‌ರಿಂಗ್ ಮತ್ತು ರೇಂಜರಿಂಗ್‌ನ ಹಂತಗಳು ಉದ್ದೇಶ ಯಾವ ರೀತಿ ರೋವರಿಂಗ್ ಮತ್ತು ರೇಂಜರಿಂಗ್ ಆರಂಭಿಸಬೇಕು. ಸಾಧ್ಯವಾದಷ್ಟು ಹೊಸತನವನ್ನು ಕಲಿಯಬೇಕು ಮತ್ತು ಜೀವನದಲ್ಲಿ ಯಾವಾಗಲೂ ಸಂತೋಷವಾಗಿರಬೇಕು ಎನ್ನುವ ಸಂದೇಶ ನೀಡಿದರು. ಕಾರ್ಯಕ್ರಮದ ಉದ್ಘಾಟಕರಾದ ಶ್ರೀಮತಿ ಗುರುಮ್ಮ ಸಿದ್ದರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್–ಗೈಡ್ಸ್ ಬೀದರ್ ಇವರು ಮಾತನಾಡುತ್ತಾ "ಸ್ಕೌಟ್–ಗೈಡ್ಸ್‌ನಿಂದ ಸ್ನೇಹ, ಸೇವೆ, ಸದ್ಭಾವನೆ, ವ್ಯಕ್ತಿತ್ವ ವಿಕಸನ, ದೇಶಭಕ್ತಿ, ಜ್ಞಾನರ್ಜನೆ ಸಾಧ್ಯ" ಎನ್ನುವ ಸಂದೇಶ ನೀಡಿದರು. ಅಧ್ಯಕ್ಷತೆ ಸ್ಥಾನ ವಹಿಸಿದ ಶ್ರೀ ಚಂದ್ರಕಾಂತ್ ಶಹಬಾದಕರ್, ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಬೀದರ್. ಬೀದರ್ ಜಿಲ್ಲೆಯಲ್ಲಿ ಪದವಿಪೂರ್ವ ಕಾಲೇಜುಗಳಲ್ಲಿ ರೋವರ್ ಮತ್ತು ರೇಂಜರ್ ಯೂನಿಟ್ ಸ್ಥಾಪಿಸಲು ಉಪನ್ಯಾಸಕರನ್ನು ಪ್ರೋತ್ಸಾಹಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ನಾಗರತ್ನಮ್ಮ ಪಾಟೀಲ್, ಜಿಲ್ಲಾ ಸಂಘಟಕಿ ನಿರೂಪಿಸಿದರು. ಶ್ರೀ ಎಸ್. ಪ್ರಭು ಸಿದ್ಧಾರ್ಥ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು ಸ್ವಾಗತಿಸಿದರು, ಪ್ರಾಸ್ತಾವಿಕ ನುಡಿಯನ್ನು ಶ್ರೀ ಚಂದ್ರಕಾಂತ್ ಗಂಗಶೆಟ್ಟಿ, ನೋಡಲ್ ಆಫೀಸರ್, ಪದವಿಪೂರ್ವ ಶಿಕ್ಷಣ ಇಲಾಖೆ, ಬೀರದ್ ಅವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶ್ರೀಕಾಂತ್ ಪಾಟೀಲ್, ಪ್ರಾಂಶುಪಾಲರು ಆರ್.ಆರ್.ಕೆ. ಪದವಿಪೂರ್ವ ಕಾಲೇಜು ಮತ್ತು ಶ್ರೀಮತಿ ಲೀಲಾವತಿ ಚಕೋಟೆ, ಜಿಲ್ಲಾ ಆಯುಕ್ತರು, ಭಾರತ್ ಸ್ಕೌಟ್ಸ್–ಗೈಡ್ಸ್, ಡಾಕ್ಟರ್ ಎಚ್.ಬಿ. ಭರಶೆಟ್ಟಿ, ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಶ್ರೀ ಸಂಗನಬಸವ, ಶಾಖಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ ಬೀದರ್, ಶ್ರೀ ಮನ್ಮಥ ಡೂಲೆ, ಪ್ರಾಂಶುಪಾಲರ ಸಂಘದ ಪ್ರಧಾನ ಕಾರ್ಯದರ್ಶಿಗಳು, ಶ್ರೀ ಗಿರಿಧರ್ ಬಿ.ಹೆಚ್. ಉಪನ್ಯಾಸಕರು, ಜ್ಞಾನಸುಧ ಪದವಿಪೂರ್ವ ಕಾಲೇಜ್, ಶ್ರೀ ನಸಿರೋದಿನ್, ಉಪನ್ಯಾಸಕರು, ಸಿದ್ಧಾರ್ಥ್ ಪದವಿಪೂರ್ವ ಕಾಲೇಜ್, ವಿವಿಧ ಕಾಲೇಜಿನ ಪ್ರಾಂಶುಪಾಲರು ಹಾಗೂ 100ಕ್ಕಿಂತ ಹೆಚ್ಚು ಉಪನ್ಯಾಸಕರು ಉಪಸ್ಥಿತರಿದ್ದರು. ಹಾಗೂ ರೋವರ್ಸ್‌ಗಳಾದ ಅಮರ, ಜೀವನ, ಶಿವಕುಮಾರ್, ಕುಪ್ಪೆ, ಸಚಿನ್, ಅವಿನಾಶ್ ಮತ್ತು ರೇಂಜರ್ಸ್‌ಗಳಾದ ಗೀತಾ, ಲವಿತಾ, ಭಾಗ್ಯವಂತಿ, ಪಲ್ಲವಿ ಸೇವೆಯನ್ನು ಸಲ್ಲಿಸಿದರು.

## ಚಿತ್ರದುರ್ಗ

"ಭಾರತದ ಈ ನೆಲ–ಜಲ ಪ್ರತಿಯೊಬ್ಬ ಭಾರತೀಯನಿಗೂ ಒಳ್ಳೆಯ ಸಂಸ್ಕೃತಿಯನ್ನು ಬಿಂಬಿಸುವ ಮಹಾನ್ ದೇವರ ಸ್ವರೂಪಿಯಾಗಿದೆ" ಎಂದು ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ. ರವಿಶಂಕರ್ ರೆಡ್ಡಿ ಹೇಳಿದರು. ಜಿಲ್ಲಾ ಸಂಸ್ಥೆ ಚಿತ್ರದುರ್ಗ ವತಿಯಿಂದ ಸೆಪ್ಟೆಂಬರ್ 4 ರಂದು ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ನಡೆದ "ಮೇರಾಮಟ್ಟಿ ಮೇರಾದೇಶ್" ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ ಆರು ತಾಲ್ಲೂಕಿನಿಂದ ತಂದಿದ್ದ ಮಣ್ಣಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಕೃಷಿ ಮತ್ತು ತೋಟಗಾರಿಕಾ ನಿರ್ದೇಶಕರಾದ ಶ್ರೀಯುತ ಮಂಜುನಾಥ



ಮಾತನಾಡಿ, "ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು" "ನಮ್ಮ ಮಣ್ಣು ನಮ್ಮ ದೇಶ" ಕಾರ್ಯಕ್ರಮ ಆಯೋಜಿಸಿರುವುದು ತುಂಬಾ ಶ್ಲಾಘನೀಯ ವಿಚಾರ, ನಾವುಗಳು ಬಾಲ್ಯದಲ್ಲಿಯೇ ಇಂತಹ ವಿಚಾರಗಳ ಬಗ್ಗೆ ತಿಳಿದುಕೊಳ್ಳಬೇಕು ಏಕೆಂದರೆ ಮಾನವನ ದುರಾಸೆಗೆ ಇಂದು ನೆಲ–ಜಲ ಸಂರಕ್ಷಣೆ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆಯ ನೆಲ–ಜಲ ರಕ್ಷಣೆಗೆ ಮುಂದಾಗಲು ಪಣ ತೊಡಬೇಕು" ಎಂದು ತಿಳಿಸಿದರು. ಜಿಲ್ಲಾ ಪ್ರಾಥಮಿಕ ಶಾಲಾ ಸಂಘ ಅಧ್ಯಕ್ಷರಾದ ಶ್ರೀಯುತ ಮಾಲತೇಶ್ ಮಾತನಾಡಿ "ನಮಗೆ ಒಳ್ಳೆಯ ಗಾಳಿ, ಬೆಳಕು, ಶುದ್ಧ ನೀರು, ಶುದ್ಧ ಪರಿಸರ ಸಿಗುತ್ತಿರುವುದು ನಮ್ಮ ನೆಲ ಪುಣ್ಯಭೂಮಿ, ಏಕೆಂದರೆ ಈ ನೆಲದಲ್ಲಿ ಮಹಾನ್ ದಾರ್ಶನಿಕರು, ಸಂತರು, ಕವಿಗಳು ಈ ಭಾರತಾಂಬೆಯ ಬಗ್ಗೆ ಒಂದೊಂದು ಕವನ, ಹಾಡುಗಳು, ಸಾಹಿತ್ಯ, ಪದ್ಯ ರಚಿಸಿದ್ದಾರೆ ಇಂತಹ ದಾರ್ಶನಿಕರು ಬರೆದ ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬೇಕು" ಎಂದು ಹೇಳಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀಯುತ ನಾಗಭೂಷಣ್, ಚಿತ್ರದುರ್ಗ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಯುತ ಶಿವಕುಮಾರ್, ಜಿಲ್ಲಾ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಯುತ ಪರಶುರಾಮಪ್ಪ, ಜಿಲ್ಲಾ ಸಂಸ್ಥೆಯ ಹೆಚ್‌ಕ್ಯೂಸಿ ಶ್ರೀಯುತ ಸತ್ಯನಾರಾಯಣ ನಾಯ್ಡು, ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜಿಲ್ಲಾ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 12 ರಂದು ಜಿಲ್ಲಾ ಮಟ್ಟದ ಕಬ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್–ರೇಂಜರ್ಸ್ ದೇಶಭಕ್ತಿ ಗೀತಾಗಾಯನ ಸ್ಪರ್ಧೆಯನ್ನು ಉಪನಿರ್ದೇಶಕರ ಕಛೇರಿ (ಆಡಳಿತ) ಸಭಾಂಗಣದಲ್ಲಿ ಆಯೋಜಿಸಲಾಯಿತು. ಗೀತ ಗಾಯನ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಯುತ ಉಜಿನಪ್ಪ, ಚಿತ್ರದುರ್ಗ ಜಿಲ್ಲಾ ಉಪಾಧ್ಯಕ್ಷರು ಮಾತನಾಡಿ, "ದೇಶಭಕ್ತಿ ಗೀತಗಾಯನ" ಆಯೋಜಿಸಿರುವುದು ಮಕ್ಕಳಿಗೆ ದೇಶದ ಬಗ್ಗೆ ಸ್ಫೂರ್ತಿ ಮತ್ತು ದೇಶಾಭಿಮಾನವನ್ನು ಮೂಡಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ" ಎಂದರು. ಇನ್ನೋರ್ವ ತೀರ್ಪುಗಾರರಾಗಿ ಶ್ರೀಮತಿ ಸುಮತಿ ರಾಜ್‌ರವರು ಮಾತನಾಡಿ, "ಮಕ್ಕಳಿಗೆ ಚಿಕ್ಕಂದಿನಿಂದಲೇ ಇಂತಹ ಸ್ಪರ್ಧೆಗಳನ್ನು ಆಯೋಜಿಸುವುದು ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಗಳನ್ನು ಗುರುತಿಸಲು ಅನುವು ಮಾಡಿಕೊಡುತ್ತದೆ" ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಿ.ಎಂ. ಲಿಂಗಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ, ಡಾ॥ ರಹಮತ್ ಉಲ್ಲಾ, ಜಿಲ್ಲಾ ಕಾರ್ಯದರ್ಶಿ, ಶ್ರೀ ಸತ್ಯನಾರಾಯಣ ನಾಯ್ಡು, ಹೆಚ್.ಕ್ಯೂ.ಸಿ., ಜಿಲ್ಲಾ ಗೈಡ್ಸ್ ತರಬೇತಿ ಆಯುಕ್ತರಾದ ಶ್ರೀಮತಿ ಗೀತಾ ಎಂ., ಸ್ಥಳೀಯ ಸಂಸ್ಥೆ ಕಸಬಾ–2 ಚಿತ್ರದುರ್ಗ ಕಾರ್ಯದರ್ಶಿ ಶ್ರೀ ಎನ್. ತಿಪ್ಪೇಶ್, ಭಾಗವಹಿಸಿದ್ದರು.



## ಚಾಮರಾಜನಗರ

ಆಗಸ್ಟ್ 9 ರಂದು ಸ್ವಾಮಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಬಿಳಿಗಿರಿರಂಗನ ಬೆಟ್ಟದಲ್ಲಿ "ವಿಶ್ವ ಬುಡಕಟ್ಟು ಜನಾಂಗದ ದಿನಾಚರಣೆ"ಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಕರ್ತವ್ಯ ಎಂದು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಸುಂದರೇಶ್‌ರವರು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವಿ.ಎಂ. ರಾಮಚಂದ್ರ, ಕುಮಾರಿ ಪಿ. ಕಮಲಮ್ಮ ಹಾಗೂ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸುಮಾರು 250ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ನಂತರ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಬುಡಕಟ್ಟು ಜನಾಂಗದ ವೇಷಭೂಷಣ ಧರಿಸಿ ನೃತ್ಯ ಪ್ರದರ್ಶನ ನೀಡಿದರು. ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಶ್ರೀ ಅಶೋಕ್ ಕುಮಾರ್ ಕೆ.ಪಿ.ರವರು ಸಂಘಟಿಸಿದರು.



* 77ನೇ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನದಲ್ಲಿ ಎಂ.ಸಿ.ಎಸ್. ಶಾಲೆಯ ಸ್ಕೌಟ್ಸ್ ತಂಡವು ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ವೆಂಕಟೇಶ್ ಮತ್ತು ಚಾಮರಾಜನಗರ ಜಿಲ್ಲೆಯ ಶಾಸಕರಾದ ಶ್ರೀ ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿಗಳಾದ ಶ್ರೀಮತಿ ಶಿಲ್ಪಾನಾಗ್, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳಾದ ಶ್ರೀಮತಿ ಪೂವಿತ ಎಸ್., ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




* ಆಗಸ್ಟ್ 16 ರಂದು ಜಿಲ್ಲಾ ಮಟ್ಟದ ಬ್ಯಾಂಡ್ ಪ್ರದರ್ಶನದಲ್ಲಿ ಸೆಂಟ್ ಜಾನ್ ಆಂಗ್ಲ ಮಾಧ್ಯಮ ಶಾಲೆ, ಗುಂಡ್ಲುಪೇಟೆಯ ಗೈಡ್ಸ್ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದು ವಿಭಾಗಿಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ದಕ್ಷಿಣ ಕನ್ನಡ

* ಸ್ಥಳೀಯ ಸಂಸ್ಥೆ ಸುಳ್ಯದ 2022–23ನೇ ಸಾಲಿನ ವಾರ್ಷಿಕ ಮಹಾಸಭೆ ಮತ್ತು ಪುನಃಶ್ಚೇತನ ಕಾರ್ಯಕ್ರಮವು ಆಗಸ್ಟ್ 04 ರಂದು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸುಳ್ಯದಲ್ಲಿ ನಡೆಯಿತು. ಸ್ಕೌಟ್ಸ್ – ಗೈಡ್ಸ್‌ನಲ್ಲಿ ಸೇವೆಸಲ್ಲಿಸಿ ನಿವೃತ್ತರಾದ ಶ್ರೀಮತಿ ರತ್ನಾವತಿ ಇವರನ್ನು ಸನ್ಮಾನಿಸಲಾಯಿತು. ರಾಜ್ಯ ಸಂಸ್ಥೆಯ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕವನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಿಡುಗಡೆಗೊಳಿಸಿದರು. ತದನಂತರ ದ್ವಿತೀಯ ಸೋಪಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೆಟ್ ನೀಡಲಾಯಿತು.



* ಆಗಸ್ಟ್ 05 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಸಂಸ್ಥೆಯ ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳ ವರ್ಚುವಲ್‌ಸಭೆ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಗೈಡ್ ಆಯುಕ್ತೆ ಹಾಗೂ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಶಾಂತರಾಮ್ ಪ್ರಭು, ಶ್ರೀಮತಿ ಶುಭ ವಿಶ್ವನಾಥ್, ಎಲ್.ಟಿ. (ಗೈ) ಸಭೆಯಲ್ಲಿ ಉಪಸ್ಥಿತರಿದ್ದು ಸಲಹೆ ಸೂಚನೆಯನ್ನು ನೀಡಿದರು. ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ, ಕೋಶಾಧಿಕಾರಿ, ಜಿಲ್ಲಾ ಸಹಾಯಕ ಆಯುಕ್ತರು ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ 25ನೇ ವಿಶ್ವ ಜಾಂಬೂರಿಯಲ್ಲಿ ಭಾಗವಹಿಸಲಿರುವ ಶ್ರೀ ಎಂ.ಜಿ. ಕಜೆ ಹಾಗೂ ಶ್ರೀಮತಿ ಜಯವಂತಿ ಸೋನ್ಸ್ ಇವರಿಗೆ ಶುಭ ಹಾರೈಸಲಾಯಿತು. ಸಭೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಸಂಘಟಿಸಿದರು.

* ಆಗಸ್ಟ್ 05 ಮತ್ತು 06 ರಂದು ಮಂಗಳೂರು ನಗರ ಉತ್ತರ ಸ್ಥಳೀಯ ಸಂಸ್ಥೆ ಹಾಗೂ ರೋಟರಿ ಕ್ಲಬ್ ಮಂಗಳೂರು ಹಿಲ್‌ಸೈಡ್ ಸಹಯೋಗದಲ್ಲಿ ಜಿಲ್ಲಾ ಸ್ಕೌಟ್‌ಭವನ, ಲಾಲ್‌ಭಾಗ್ ಮಂಗಳೂರು ಇಲ್ಲಿ ಸ್ಕೌಟ್–ಗೈಡ್‌ವಿದ್ಯಾರ್ಥಿಗಳಿಗೆ ರೋಟರಿ ಯುವ ನಾಯಕತ್ವ ಪ್ರಶಸ್ತಿ 2023 ಎಂಬ ಎರಡು ದಿನಗಳ ಕಾರ್ಯಗಾರ ನಡೆಯಿತು. ಎರಡು ದಿನಗಳ ಈ ಕಾರ್ಯಾಗಾರದಲ್ಲಿ ರೋಟರಿ ಕ್ಲಬ್‌ಹಾಗೂ ಸ್ಥಳೀಯ ಸಂಸ್ಥೆಯ ವಿವಿಧ ಪದಾಧಿಕಾರಿಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳ ಬೆಳವಣಿಗೆಗೆ ಸಹಾಯಕವಾಗುವಂತಹ ವಿವಿಧ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರು ಭೇಟಿ ನೀಡಿ ಕಾರ್ಯಗಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಮಕ್ಕಳಿಗೆ ಶುಭ ಹಾರೈಸಿದರು. ಮಂಗಳೂರು ನಗರ ಉತ್ತರ ಸ್ಥಳೀಯ ಸಂಸ್ಥೆಯ ಎ.ಡಿ.ಸಿ ರೊಟೇರಿಯನ್ ಡಾ. ರಾಹುಲ್ ತೋನ್ಸೆ ಮತ್ತು ಅವರ ತಂಡ ಹಾಗೂ ಮಂಗಳೂರು ಉತ್ತರ ಸ್ಥಳೀಯ ಸಂಸ್ಥೆಯ ತಂಡದ ಮಾರ್ಗದರ್ಶನದಲ್ಲಿ ಕಾರ್ಯಗಾರ ಉತ್ತಮವಾಗಿ ನಡೆಯಿತು. ಕಾರ್ಯಗಾರದಲ್ಲಿ ಭಾಗವಹಿಸಿದ ಎಲ್ಲಾ ಸ್ಕೌಟ್–ಗೈಡ್‌ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.

* ರಾಜ್ಯ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ವತಿಯಿಂದ ಆಗಸ್ಟ್ 04 ರಿಂದ 10ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ 2023–24ನೇ ಸಾಲಿನ ಕಬ್ ಮಾಸ್ಟರ್ ಹಾಗೂ ಸ್ಕೌಟ್ ಮಾಸ್ಟರ್‌ಗಳ ಪ್ರಾಥಮಿಕ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಪ್ರತಿಮ್ ಕುಮಾರ್, ಜಿಲ್ಲಾ ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, ಸ್ಕೌಟ್ ವಿಭಾಗದ ನಾಯಕರಾದ ಶ್ರೀ ಗುರುಮೂರ್ತಿ, ಎಲ್.ಟಿ. (ಸ್ಕೌ), ಶ್ರೀಮತಿ ರವಿಕಲಾ ಎ.ಎಲ್.ಟಿ. (ಸ್ಕೌ), ಸ್ಕೌಟ್ ವಿಭಾಗದಲ್ಲಿ 12, ಕಬ್ ವಿಭಾಗದಲ್ಲಿ 9 ಒಟ್ಟು 21 ಶಿಬಿರಾರ್ಥಿಗಳು ಭಾಗವಹಿಸಿರುತ್ತಾರೆ.

* ಆಗಸ್ಟ್ 05 ರಂದು ಮಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 2023–24ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಸ್ಕೌಟರ್–ಗೈಡರ್‌ಗಳು ಭಾಗವಹಿಸಿ, ಮಾಹಿತಿಯನ್ನು ಪಡೆದುಕೊಂಡರು.

* ಆಗಸ್ಟ್ 07 ರಂದು ವಿಟ್ಲ ಸ್ಥಳೀಯ ಸಂಸ್ಥೆಯ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿ ಶ್ರೀ ಮುಲ್ಲೈ ಮುಹಿಲನ್ ಎಂ.ಪಿ. (ಭಾ.ಆ.ಸೇ) ಇವರನ್ನು ಭೇಟಿ ಜಿಲ್ಲಾ ಸಂಸ್ಥೆ ವತಿಯಿಂದ ಸ್ಕಾರ್ಫ್‌ತೊಡಿಸಿ ಗೌರವಿಸಲಾಯಿತು. ರಾಜ್ಯ ಸಂಸ್ಥೆಯ 2023–24ನೆ ಸಾಲಿನ ಯೋಜನಾ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕೋಶಾಧಿಕಾರಿ ಶ್ರೀ ಅನಿಲ್‌ಕುಮಾರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ವಿಟ್ಲ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುದರ್ಶನ್ ಪಡಿಯಾರ್, ಉಪಾಧ್ಯಕ್ಷರಾದ ಶ್ರೀ ಜಯರಾಮ್ ಬಲ್ಲಾಳ, ಶ್ರೀ ಸುರೇಶ್ ಬನಾರಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪ್ರತೀಪ್ ಉಪಸ್ಥಿರಿದ್ದರು.

* ಆಗಸ್ಟ್ 07 ರಂದು ವಿಟ್ಲ ಸ್ಥಳೀಯ ಸಂಸ್ಥೆಯ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಅಪರ ಜಿಲ್ಲಾಧಿಕಾರಿ ಡಾ. ಜಿ. ಸಂತೋಷ್ ಕುಮಾರ್, ಕೆ.ಎ.ಎಸ್ ಇವರನ್ನು ಭೇಟಿ ಮಾಡಿ ಜಿಲ್ಲಾ ಸಂಸ್ಥೆಯ ವತಿಯಿಂದ ಸ್ಕಾರ್ಫ್‌ತೊಡಿಸಿ ಗೌರವಿಸಲಾಯಿತು. ರಾಜ್ಯ ಸಂಸ್ಥೆಯ 2023–24ನೇ ಸಾಲಿನ ಯೋಜನಾ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕೋಶಾಧಿಕಾರಿ ಶ್ರೀ ಅನಿಲ್ ಕುಮಾರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಉಪಸ್ಥಿತರಿದ್ದರು.

* ಜಿಲ್ಲಾ ಸಂಸ್ಥೆ ವತಿಯಿಂದ ಆಗಸ್ಟ್ 12 ರಿಂದ 18ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನಡೆದ ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಪ್ರಾಥಮಿಕ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಿತು. ತರಬೇತಿಯನ್ನು ಮೂಡುಶೆಡ್ಡೆ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ಶ್ರೀಮತಿ ಕವಿತರವರು ಉದ್ಘಾಟಿಸಿ ಶುಭ ಹಾರೈಸಿದರು.



ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಪ್ರತಿಮ್ ಕುಮಾರ್, ಎಲ್.ಟಿ. (ಸ್ಕೌ), ಜಿಲ್ಲಾ ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, ಎಲ್.ಟಿ (ಗೈ), ಫ್ಲಾಕ್ ವಿಭಾಗದ ನಾಯಕಿಯಾದ ಶ್ರೀಮತಿ ವಿಮಲಾ ಬಾಯಿ, ಎಲ್.ಟಿ. (ಫ್ಲಾ), ಗೈಡ್ ವಿಭಾಗದ ನಾಯಕಿಯಾದ ಶ್ರೀಮತಿ ಅಕ್ಕಮ್ಮ ಎ.ಎಲ್.ಟಿ. (ಗೈ), ಶಿಬಿರದಲ್ಲಿ ಬುಲ್‌ಬುಲ್ ವಿಭಾಗದಲ್ಲಿ 6 ಹಾಗೂ ಗೈಡ್ ವಿಭಾಗದಲ್ಲಿ 20 ಒಟ್ಟು 26 ಶಿಬಿರಾರ್ಥಿಗಳು ಭಾಗವಹಿಸಿದರು.



ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಅನಿಲ್‌ಕುಮಾರ್ ಉಪಾಧ್ಯಕ್ಷರು ಮೂಡುಶೆಡ್ಡೆ ಗ್ರಾಮ ಪಂಚಾಯತ್, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಪ್ರತಿಮ್ ಕುಮಾರ್ ಎಲ್.ಟಿ. (ಸ್ಕೌ), ಸ್ಕೌಟ್ ವಿಭಾಗದ ಶಿಬಿರ ನಾಯಕರಾದ ಶ್ರೀ ಗುರಮೂರ್ತಿ ನಾಯ್ಕಾಪು ಎಲ್.ಟಿ. (ಸ್ಕೌಟ್), ಸಹಾಯಕರಾದ ಶ್ರೀ ವಿನೋದ್ ಚೆವಾರ್, ಹೆಚ್.ಡಬ್ಲ್ಯೂ.ಬಿ. (ಸ್ಕೌ), ಶ್ರೀ ರವಿ ಕುಮಾರ್, ಹೆಚ್.ಡಬ್ಲ್ಯೂ.ಬಿ. (ಕಬ್) ಉಪಸ್ಥಿತರಿದ್ದರು. ಶಿಬಿರದ ಅನುಭವವನ್ನು ಶ್ರೀ ಶಿವಾನಂದ  ಹಾಗೂ ಶ್ರೀ ಪ್ರಸನ್ನರವರು ಹಂಚಿಕೊಂಡರು. ಶಿಬಿರಾರ್ಥಿ ಶ್ರೀಮತಿ ಜ್ಯೋತಿ ಸ್ವಾಗತಿಸಿ, ಶ್ರೀ ರಾಜು ಕಾರ್ಯಕ್ರಮ ನಿರೂಪಿಸಿದರು.

* ಆಗಸ್ಟ್ 15 ರಂದು ಜಿಲ್ಲಾ ಸಂಸ್ಥೆ, ಮಂಗಳೂರು ಉತ್ತರ ನಗರ ಸ್ಥಳೀಯ ಹಾಗೂ ಮಂಗಳೂರು ದಕ್ಷಿಣ ನಗರ ಸ್ಥಳೀಯ ಸಂಸ್ಥೆಯ ಸಹಭಾಗಿತ್ವದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಬಾಗ್ ಮಂಗಳೂರಿನಲ್ಲಿ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಧ್ವಜಾರೋಹಣವನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ರಾಮಶೇಷ ಶೆಟ್ಟಿಯವರು ನೆರವೇರಿಸಿದರು. ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಸಂತ್‌ರಾವ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಜಿಲ್ಲಾ ಕೋಶಾಧಿಕಾರಿ ಶ್ರೀ ಅನಿಲ್‌ಕುಮಾರ್, ಮಂಗಳೂರು ಉತ್ತರ  ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಕಿಣಿ, ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಶುಭಾ ವಿಶ್ವನಾಥ್,



ಶ್ರೀಮತಿ ಸುಫಲ, ಮಂಗಳೂರು ಉತ್ತರ ನಗರ ಸ್ಥಳೀಯ ಉಪಾಧ್ಯಕ್ಷರಾದ ಶ್ರೀಮತಿ ಲಯನ್ ಶಕಿಲಾ ರಾಜ್, ಮಂಗಳೂರು ಉತ್ತರ ನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಮೋಹಿನಿ ರಾಮಚಂದ್ರ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಕಾರ್ಯಕ್ರಮವನ್ನು ಸಂಘಟಿಸಿದರು.

* ಆಗಸ್ಟ್ 15 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪರೇಡ್‌ನಲ್ಲಿ ಶ್ರೀವ್ಯಾಸ ಮಹರ್ಷಿ ವಿದ್ಯಾಪೀಠ ಕಿಲ್ಪಾಡಿ ಮುಲ್ಕಿಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದರು. ನಾಯಕತ್ವವನ್ನು ಸಂಸ್ಥೆಯ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಶ್ರೀಲಕ್ಷ್ಮಿ ಹಾಗೂ ಶ್ರೀಮತಿ ಶೈಲಜಾರವರು ವಹಿಸಿದರು.

* ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ 76ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಮಾಜಿ ಮೂಡುಶೆಡ್ಡೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಕವಿತಾ ಧ್ವಜಾರೋಹಣ ನೆರವೇರಿಸಿದರು. ಇವರೊಂದಿಗೆ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀಯವರು ಭಾಗವಹಿಸಿ ಮಾತನಾಡಿದರು ಹಾಗೂ ಶಿಬಿರದ ನಾಯಕರು ಶ್ರೀಮತಿ ವಿಮಲಬಾಯಿ ಹಾಗೂ ಶ್ರೀಮತಿ ಅಕ್ಕಮ್ಮರೊಂದಿಗೆ ಜಿಲ್ಲೆಯ ವಿವಿಧ ಶಾಲೆಗಳ ಶಿಕ್ಷಕಿಯರು ಭಾಗವಹಿಸಿದರು.

* ಆಗಸ್ಟ್ 18 ರಂದು ಕರ್ನಾಟಕ ಸರಕಾರ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ  ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಬಾಗ್ ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ, ಅನುದಾನಿತ, ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ/ಉಪನ್ಯಾಸಕಿಯರುಗಳ ರೋವರ್‌ಮತ್ತು ರೇಂಜರ್ ಮಾಹಿತಿ ಕಾರ್ಯಗಾರವು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ  ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾತನಾಡಿ "ಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರೋವರ್ ಮತ್ತು ರೇಂಜರ್ ವಿಭಾಗವು ಅವಕಾಶವನ್ನು ಒದಗಿಸಿಕೊಡುತ್ತದೆ. ಆದುದರಿಂದ ತಾವೆಲ್ಲರೂ ತಮ್ಮ ವಿದ್ಯಾರ್ಥಿಗಳನ್ನು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕೆಂದು" ಹೇಳಿದರು. ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಆನಂದ್ ಕೆ.,ರವರು ದೀಪ ಬೆಳಗಿಸಿ ಉದ್ಘಾಟಿಸಿ, "ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು



ಹಲವು ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವ ಒಂದು ಸೇವಾ ಸಂಸ್ಥೆಯಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘಟಿಸುವ ಸೇವಾ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಉಪನ್ಯಾಸಕರು ಶ್ರಮವಹಿಸಬೇಕೆಂದು" ತಿಳಿಸಿದರು. ಶ್ರೀ ಸಿ.ಡಿ. ಜಯಣ್ಣ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ದ.ಕ. ಮಂಗಳೂರು, ಶ್ರೀ ಕೆ.ಎನ್. ಗಂಗಾಧರ್ ಆಳ್ವ, ಅಧ್ಯಕ್ಷರು ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ ದ.ಕ. ಮಂಗಳೂರು, ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು, ಶ್ರೀಮತಿ ಮಲ್ಲೇಶ್ವರಿ ಜುಜಾರೆ ರಾಜ್ಯ ರೇಂಜರಿಂಗ್ ಮೇಲ್ವಿಚಾರಕರು ಹಾಗೂ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ವಿಮಲ ರಂಗಯ್ಯ, ಶ್ರೀ ರಾಮಶೇಷ ಶೆಟ್ಟಿ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಗಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 125ಕ್ಕೂ ಅಧಿಕ ಪದವಿ ಪೂರ್ವ ಕಾಲೇಜಿನಿಂದ 77 ಉಪನ್ಯಾಸಕರು 117 ಉಪನ್ಯಾಸಕಿಯರು ಒಟ್ಟು 194 ಶಿಬಿರಾರ್ಥಿಗಳು ಭಾಗವಹಿಸಿದ್ದರು.

* ಆಗಸ್ಟ್ 18 ರಂದು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಕಟ್ಟಡದ ವೀಕ್ಷಣೆಯನ್ನು ಮಾಡಲು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಆಗಮಿಸಿ ಕೆಲಸ ಕಾರ್ಯದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಮೋಹನ್ ಆಳ್ವರವರು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದ ಕೆಲಸ ಕಾರ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ರಾಜ್ಯ ರೇಂಜರ್ ಮೇಲ್ವಿಚಾರಕರು ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಪ್ರತೀಮ್ ಕುಮಾರ್, ಜಿಲ್ಲಾ



ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ ಉಪಸ್ಥಿತರಿದ್ದರು.

* ಸ್ಥಳೀಯ ಸಂಸ್ಥೆ ವಾಮದಪದವು ಇದರ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ವಲಯದ ಕಬ್–ಬುಲ್‌ಬುಲ್ ಮತ್ತು ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಆಗಸ್ಟ್ 19 ರಂದು ಬಸ್ತಿಕೋಡಿಯ ಅಂಬೇಡ್ಕರ್ ಭವನದಲ್ಲಿ ದೇಶ ಭಕ್ತಿಗೀತೆ ಸ್ಪರ್ಧೆಯು ನಡೆಯಿತು. ಸಭಾ ವೇದಿಕೆಯಲ್ಲಿ ಸ್ಕೌಟ್ಸ್ ಎ.ಡಿ.ಸಿ. ಶ್ರೀ ಶೇಖ್ ರೆಹಮ ತುಲ್ಲಾ, ಕಾರ್ಯದರ್ಶಿ ಶ್ರೀ ಸುಕೇಶ್ ಕೆ, ಶ್ರೀ ಬುರೂಜ್, ಶಾಲಾ ಸ್ಕೌಟ್ ಶಿಕ್ಷಕಿ ಶ್ರೀಮತಿ ವನಿತಾ, ಎಲ್.ಸಿ.ಆರ್. ಇಂಡಿಯನ್ ಸ್ಕೂಲ್ ಕಕ್ಕೆ ಪದವು ಶಾಲೆಯ ಶ್ರೀಮತಿ ಪ್ರಿಯತ ಹಾಗೂ ಶ್ರೀ ರೆಹಮತ್ ಇವರುಗಳು ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಆನಂದ ಆಚಾರ್ಯ ಇವರ ಅಧ್ಯಕ್ಷತೆಯನ್ನು ವಹಿಸಿದ್ದರು.

* ಆಗಸ್ಟ್ 20 ರಂದು ರಾಜ್ಯ ಸಂಸ್ಥೆಯ ವತಿಯಿಂದ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಬಾಗ್ ಮಂಗಳೂರಿನಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯರವರ ಅಧ್ಯಕ್ಷತೆಯಲ್ಲಿ ರೋವರ್ ಮತ್ತು ರೇಂಜರ್ ಚಟುವಟಿಕೆ, ಕಾರ್ಯಕ್ರಮ ಹಾಗೂ ತರಬೇತಿಗಳ ಬಗ್ಗೆ ಮಾಹಿತಿ ಸಭೆ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಸುಕುಮಾರ ಕೆ., ರಾಷ್ಟ್ರೀಯ ಆಯುಕ್ತರು (ವಯಸ್ಕ ನಾಯಕ ತರಬೇತಿ), ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ರೇಂಜರಿಂಗ್ ಮೇಲ್ವಿಚಾರಕರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಜಿಲ್ಲಾ ಗೈಡ್ ಆಯುಕ್ತೆ ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಪ್ರತೀಮ್ ಕುಮಾರ್, ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಶಾಂತರಾಮ್ ಪ್ರಭು, ಬಂಟ್ವಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಂ. ತುಂಬೆ, ಹಿರಿಯ ಗೈಡರ್ ಶ್ರೀಮತಿ ಶುಭಾ ವಿಶ್ವನಾಥ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ಉಪಸ್ಥಿತರಿದ್ದರು.



* ಆಗಸ್ಟ್ 22 ರಂದು ಸ್ಥಳೀಯ ಸಂಸ್ಥೆ ಗುರುಪುರ ಇವರ ವತಿಯಿಂದ ನಾಡೋಜ ಡಾ. ಗೊ.ರು. ಚೆನ್ನಬಸಪ್ಪನವರ ಹೆಸರಿನಲ್ಲಿ ದೇಶಭಕ್ತಿ ಗೀತಗಾಯನ ಸ್ಪರ್ಧೆಯು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನಡೆಯಿತು. ಗುರುಪುರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸೋಹನ್ ಅತಿಕಾರಿ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಹಿತನುಡಿಗಳನ್ನಾಡಿದರು. ಸ್ಥಳೀಯ ಸಂಸ್ಥೆಯ ಜಿಲ್ಲಾ ಪ್ರತಿನಿಧಿಯಾದ ಶ್ರೀಯುತ ಸುನಿಲ್‌ಕುಮಾರ್ ಶೆಟ್ಟಿಯವರು ಪ್ರಾಸ್ತಾವಿಕ ಭಾಷಣ ಮಾಡಿ ಎಲ್ಲರನ್ನೂ ಸ್ವಾಗತಿಸಿದರು. ಸ್ಥಳೀಯ ಸಂಸ್ಥೆಯ ಮಾಜಿ ಜೊತೆ ಕಾರ್ಯದರ್ಶಿಯಾದ ಶ್ರೀಮತಿ ಅಸುಂಪ್ತ ಅವರು ವಂದಿಸಿದರು.

ವೇದಿಕೆಯಲ್ಲಿ ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸ್ವರ್ಣಲತಾ ಹಾಗೂ ತೀರ್ಪುಗಾರರಾಗಿ ಶ್ರೀಮತಿ ಲಿಡಿಯಾ ಮೊಂತೆರೊ, ಕು॥ ರಕ್ಷಾ ಪಿ.ಪಿ., ಕು॥ ಮೇಘನಾ ಆರ್. ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ಗೀತಾ ಗಾಯನ ಸ್ಪರ್ಧೆ ನಡೆಯಿತು. ಒಟ್ಟು ಎಂಟು ಸಂಸ್ಥೆಗಳ ಮಕ್ಕಳು ಭಾಗವಹಿಸಿದ್ದರು. ಕಬ್ಸ್ 5, ಸ್ಕೌಟ್ಸ್ 6, ಬುಲ್‌ಬುಲ್ಸ್ 5 ಹಾಗೂ ಗೈಡ್ಸ್ 8 ಭಾಗವಹಿಸಿದ್ದರು.

* ಮಂಗಳೂರು ದಕ್ಷಿಣ ನಗರ ಸ್ಥಳೀಯ ಸಂಸ್ಥೆಯ 2023ನೇ ಸಾಲಿನ ಸ್ಥಳೀಯ ಮಟ್ಟದ ದೇಶಭಕ್ತಿ ಗೀತೆ ಮತ್ತು ಜಾನಪದ ಗೀತಾ ಗಾಯನ ಸ್ಪರ್ಧೆ ಮಂಗಳೂರಿನ ಶಕ್ತಿ ನಗರದಲ್ಲಿರುವ ಶಕ್ತಿ ವಸತಿ ಶಾಲೆಯ ರೇಷ ಮೆಮೋರಿಯಲ್ ಸಭಾಂಗಣದಲ್ಲಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಕ್ತಿ ವಿದ್ಯಾ ಸಂಸ್ಥೆಯ ಸಂಸ್ಥಾಪಕರಾದ ಡಾ. ಕೆ.ಸಿ. ನಾಯ್ಕ್ ಅವರು ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್ ರಾವ್‌ರವರು ವಹಿಸಿಕೊಂಡು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಈ ಕಾರ್ಯಕ್ರಮವನ್ನು ಗೈಡ್ ಕ್ಯಾಪ್ಟನ್ ಶ್ರೀಮತಿ ಭವ್ಯಶ್ರೀಯವರು ನಿರೂಪಿಸಿ, ಕಬ್ ಮಾಸ್ಟರ್ ಶಿಕ್ಷಕ ಶರಣಪ್ಪ ಸ್ವಾಗತಿಸಿದರು. ಶಕ್ತಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ರವಿಶಂಕರ್ ಹೆಗಡೆ ವಂದಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ದೇಶಭಕ್ತಿ ಗೀತಗಾಯನ ಹಾಗೂ ರೋವರ್ಸ್–ರೇಂಜರ್ಸ್ ಜಾನಪದ ಗೀತಗಾಯನ ಸ್ಪರ್ಧೆ ಮತ್ತು ಸ್ಕೌಟರ್–ಗೈಡರ್‌ಗಳ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಸೆಪ್ಟೆಂಬರ್ 01 ಮತ್ತು 02 ರಂದು ನಡೆಯಿತು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಸಂತ್ ರಾವ್ ವಹಿಸಿಕೊಂಡು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಮಂಗಳೂರು ದಕ್ಷಿಣ ತಾಲ್ಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿಗಳು ಡಾ. ಪ್ರಶಾಂತ್ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ವಿಮಲ ರಂಗಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ಮತ್ತು ಜಿಲ್ಲಾ ಜಂಟಿ ಕಾರ್ಯದರ್ಶಿ ಉಪಸ್ಥಿತರಿದ್ದರು. ಜಿಲ್ಲೆಯ 17 ಸ್ಥಳೀಯ ಸಂಸ್ಥೆಯಿಂದ ಒಟ್ಟು 680 ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ 140 ಶಿಕ್ಷಕರು ಒಟ್ಟು 820 ಮಂದಿ ಭಾಗವಹಿಸಿದರು.

* ಸೆಪ್ಟೆಂಬರ್ 09 ರಂದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಬಾಗ್, ಮಂಗಳೂರಿನಲ್ಲಿ ಸ್ಥಳೀಯ ಸಂಸ್ಥೆ ಹಾಗೂ ಲಯನ್ಸ್ ಇಂಟರ್ ನ್ಯಾಷನಲ್ ಡಿಸ್ಟ್ರಿಕ್ಟ್ 317–ಡಿ ಇವರ ಸಹಯೋಗದಲ್ಲಿ ರಾಷ್ಟ್ರಾಭಿಮಾನ ಪುನರುದ್ದೀಪನ ಮಾಹಿತಿ ಕಾರ್ಯಾಗಾರ ನಡೆಯಿತು.




ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು, ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಮಂಗಳೂರು ದಕ್ಷಿಣ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ವಿವಿಧ ಶಾಲಾ/ಕಾಲೇಜಿನಿಂದ 175 ಕ್ಕಿಂತ ಹೆಚ್ಚು ಸ್ಕೌಟ್ಸ್ – ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ ಶಿಕ್ಷಕರು ಭಾಗವಹಿಸಿದರು.

* ನೆಹರು ಮೆಮೋರಿಯಲ್ ಕಾಲೇಜ್ ಸುಳ್ಯ, ಇದರ ರೋವರ್ ಮತ್ತು ರೇಂಜರ್ ಘಟಕ 2023–24ರ ಕಾರ್ಯ ಚಟುವಟಿಕೆಗಳ ಅಭಿವಿನ್ಯಾಸ ಕಾರ್ಯಕ್ರಮವು ಕಾಲೇಜಿನ ದೃಶ್ಯ–ಶ್ರವಣ ಕೊಠಡಿಯಲ್ಲಿ ನೆರವೇರಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರದ ಪ್ರೊ. ರುದ್ರಕುಮಾರ್ ಎಂ.ಎಂ. ವಹಿಸಿ, ರೋವರ್ ಮತ್ತು ರೇಂಜರ್ಸ್‌ಗಳಿಗೆ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗಿನ ತರಬೇತಿಗಳೂ, ಉನ್ನತ ವ್ಯಾಸಂಗದಲ್ಲಿ ಇದರ ಪ್ರಯೋಜನಗಳು ಮತ್ತು ಉದ್ಯೋಗವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ., ಇವರು ತಮ್ಮ ಜೀವನ ಘಟನೆಯನ್ನು ವಿವರಿಸುತ್ತಾ, ಜೀವನದಲ್ಲಿ ಗುರಿಯನ್ನು ಯಾವ ರೀತಿಯಲ್ಲಿ ತಲುಪಬೇಕು ಹಾಗು ಸಮಾಜಮುಖಿ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರ ಜೊತೆಗೆ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ವಿಕಸನವನ್ನು ನಿರ್ಮಾಣ ಮಾಡಬೇಕು ಹಾಗೂ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳು ಉತ್ತೇಜಿಸಿದರು. ಮುಖ್ಯ ಅತಿಥಿಗಳಾಗಿ ಎನ್.ಎಂ.ಪಿ.ಯು.ಸಿ.ಯ ಪ್ರಾಂಶುಪಾಲರಾದ ಶ್ರೀಮತಿ ಹರಿಣಿ ಪುತ್ತುರಾಯ, ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳೂ ತಮ್ಮನ್ನು ತಾವು ತೊಡಗಿಸಿಕೊಂಡು ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಆಶಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರೇಮಲತಾ, ಕಾರ್ಯದರ್ಶಿಗಳು ಬಿ.ಎಸ್.ಜಿ., ಸ್ಥಳೀಯ ಸಂಸ್ಥೆ ಸುಳ್ಯ ಉಪಸ್ಥಿತರಿದ್ದು, ಇವರು ಸ್ಥಳೀಯ ಸಂಸ್ಥೆಯ ಸ್ಕೌಟ್ ಮತ್ತು ಗೈಡ್ ವಿಭಾಗಗಳಲ್ಲಿ ನಡೆಯಲ್ಪಡುವಂತಹ ಕಾರ್ಯ ಚಟುವಟಿಕೆಗಳು ಹಾಗೂ ಅದರ ಸದುಪಯೋಗಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ರೋವರ್ ಘಟಕದ ನಾಯಕರಾದ ಶ್ರೀ ಉಮೇಶ್ ಪ್ರಾಸ್ತಾವಿಕ ನುಡಿಗಳೊಂದಿಗೆ ಗಣ್ಯರನ್ನು ಸ್ವಾಗತಿಸಿ, ದೀಪ್ತಿ ರೇಂಜರ್ ವಿದ್ಯಾರ್ಥಿನಿ ಕಾರ್ಯಕ್ರಮವನ್ನು ನಿರೂಪಿಸಿದರು. ರೇಂಜರ್ ಘಟಕ ನಾಯಕಿ ಶ್ರೀಮತಿ ಶೋಭಾ ಎ. ಹಾಗೂ ಸಹನಾಯಕಿ ಶ್ರೀಮತಿ ರಾಜೇಶ್ವರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ದಾವಣಗೆರೆ

ಆಗಸ್ಟ್ 18 ರಂದು ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಗೀತಗಾಯನ ಸ್ಪರ್ಧೆಯನ್ನು ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಅಧ್ಯಕ್ಷರಾಗಿ ಶ್ರೀಮತಿ ರೇಖಾರಾಣಿ ಜಿಲ್ಲಾ ಸಹಾಯಕ ಆಯುಕ್ತರು, ಮುಖ್ಯ ಅತಿಥಿಗಳಾಗಿ ಶ್ರೀ ಜಯದೇವಯ್ಯನವರು ಅಧ್ಯಕ್ಷರು ಶ್ರೀ ಸಿದ್ಧಗಂಗಾ ಸ್ಥಳೀಯ ಸಂಸ್ಥೆ ಹಾಗೂ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಅತಿಥಿಗಳಾಗಿ ಶ್ರೀಮತಿ ಗಾಯಿತ್ರಿ ಚಿಮ್ಮಡ್, ಖಜಾಂಚಿಗಳು ಭಾಗವಹಿಸಿದ್ದರು. ತೀರ್ಪುಗಾರರಾಗಿ ಕುಮಾರಿ ದಿವ್ಯ ವಸಿಷ್ಠ, ಸಂಗೀತ ಶಿಕ್ಷಕಿ, ತರಳಬಾಳು ಶಾಲೆ ಶ್ರೀಮತಿ ಮೀನಾಕ್ಷಿ, ಶ್ರೀಮತಿ ರತ್ನ ಎಂ. ಶ್ರೀಮತಿ ರೇಖಾರಾಣಿಯವರು ಭಾಗವಹಿಸಿದ್ದರು. ಈ ದೇಶಭಕ್ತಿ ಗೀತಗಾಯನಕ್ಕೆ ಸುಮಾರು 182 ಮಕ್ಕಳು, 28 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು. ಶ್ರೀಮತಿ ಶಶಿಕಲಾ, ಕಾರ್ಯದರ್ಶಿಗಳು ಮಾರ್ಗದರ್ಶನದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಮಹೇಶ್‌ರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

* ನಗರದ ಶ್ರೀ ಸಿದ್ಧಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸನ್‌ರೈಸ್ ಡೇ ಹಾಗೂ ಸ್ಕಾರ್ಫ್ ಡೇಯನ್ನು ನಗರದ ಸಿದ್ಧಗಂಗಾ ಶಾಲೆಯಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ ಮತ್ತು ಗೈಡ್ಸ್ ಘಟಕಗಳಿಂದ ಆಚರಿಸಲಾಯಿತು. ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೇರ್ಮನ್, ಶಾಲಾ ಪ್ರಾಂಶುಪಾಲರಾದ ಜಸ್ಟಿನ್ ಡಿ'ಸೋಜರವರು ಉಪಾಧ್ಯಾಯರಾದ ಶ್ರೀ ಉಮೇಶ್, ಶ್ರೀ ಪುಟ್ಟಸ್ವಾಮಿ ಇವರಿಗೆ ಸ್ಕಾರ್ಫ್ ಹಾಕುವುದರ ಮೂಲಕ ಸದಸ್ಯರನ್ನಾಗಿ ಮಾಡಿಕೊಂಡರು. ಶ್ರೀಮತಿ ಶಶಿಕಲಾ, ಕಾರ್ಯದರ್ಶಿಗಳು ಇದರ ಮಹತ್ವ ಮತ್ತು ಪ್ರತಿಜ್ಞೆಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ 300 ಮಕ್ಕಳು ಭಾಗವಹಿಸಿದ್ದರು. ಹಾಗೂ ಕಬ್ ಮಾಸ್ಟರ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು.



* ಆಗಸ್ಟ್ 24 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವದ ಪ್ರಯುಕ್ತ ಮೇರಾ ಮಿಟ್ಟಿ ಮೇರಾದೇಶ್ ಎಂಬ ಕಾರ್ಯದಡಿಯಲ್ಲಿ ಮಣ್ಣು ತುಂಬಿ ಕಳಸವನ್ನು ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಜಸ್ಟೀನ್ ಡಿಸೌಜ ಮತ್ತು ಕಾರ್ಯದರ್ಶಿ ಶ್ರೀ ಮಹೇಶ್ ಎಂ.ಸಿ., ಜಿಲ್ಲಾ ಸಂಸ್ಥೆಗೆ ತಲುಪಿಸಲು ಗೈಡ್ಸ್ ಮಕ್ಕಳಿಗೆ ನೀಡಿದರು. ಮಕ್ಕಳು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರಿಗೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಉಪಸ್ಥಿತರಿದ್ದರು.

* ಆಗಸ್ಟ್ 24 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಗ್ಲೋಬಲ್ ಪಬ್ಲಿಕ್ ಶಾಲೆಯಲ್ಲಿ ದೀಕ್ಷಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಶ್ರೀಮತಿ ಶಾರದಾ ಮಗಾನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.

* ಆಗಸ್ಟ್ 28 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆಯಲ್ಲಿ ವಿಪತ್ತು ನಿರ್ವಹಣಾ ಪಡೆಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕಿರಣ್‌ಕುಮಾರ್, ಸಬ್ ಇನ್ಸ್‌ಪೆಕ್ಟರ್ ಶ್ರೀ ಸಂಗಮೇಶ್ ಹಾಗೂ ಸಿಬ್ಬಂದಿ ವರ್ಗದವರು ವಿಪತ್ತಿನ ಸಮಯದಲ್ಲಿ ಹೇಗೆ ಕಾರ್ಯ ನಿರ್ವಹಿಸಲಾಗುವುದು ಎಂದು ವಿವರಿಸಿದರು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟರ್ಸ್ ಗೈಡರ್ಸ್‌ಗಳು ಶಾಲಾ ಮುಖ್ಯಸ್ಥರು ಉಪಸ್ಥಿತರಿದ್ದರು.



* ಆಗಸ್ಟ್ 27 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆ ವತಿಯಿಂದ ಆರ್.ವಿ.ಜಿ.ಕೆ ಪ್ರೌಢಶಾಲೆಯಲ್ಲಿ ಸ್ಥಳೀಯ ಸಂಸ್ಥೆ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾಂತಾ ಎಸ್.ಯಾವಗಲ್ ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ ಭಾಗವಹಿಸಿದ್ದರು.

* ಆಗಸ್ಟ್ 27 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಶ್ರೀ ತರಳಬಾಳು ವಸತಿಯುತ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ದಿನೇಶ್ ಕೆ. ಶೆಟ್ಟಿ, ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸೋಮಶೇಖರಪ್ಪ, ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ., ಸ್ಕೌಟರ್ಸ್ ಗೈಡರ್ಸ್‌ಗಳು ಉಪಸ್ಥಿತರಿದ್ದರು.

* ಆಗಸ್ಟ್ 30 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಅಂತರ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸೆಂಟ್ ಪಾಲ್ಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮೇಘನಾಥನ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ.ಟಿ.ಎಂ ಉಪಸ್ಥಿತರಿದ್ದರು.

* ಆಗಸ್ಟ್ 30 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಿ.ಎಸ್.ಎಸ್.ಇ.ಎಂ.ಆರ್. ಶಾಲೆ ತೋಳಹುಣಸೆ ಇಲ್ಲಿ ವಿಪತ್ತು

ನಿರ್ವಹಣಾ ಪಡೆಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಸರ್ಕಲ್ ಇನ್ಸಪೆಕ್ಟರ್ ಶ್ರೀ ಕಿರಣ್‌ಕುಮಾರ್, ಸಬ್ ಇನ್ಸಪೆಕ್ಟರ್ ಶ್ರೀ ಸಂಗಮೇಶ್ ಹಾಗೂ ಸಿಬ್ಬಂದಿ ವರ್ಗದವರು ವಿಪತ್ತಿನ ಸಮಯದಲ್ಲಿ ಹೇಗೆ ಕಾರ್ಯ ನಿರ್ವಹಿಸಲಾಗುವುದು ಎಂದು ವಿವರಿಸಿದರು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟರ್ಸ್ ಗೈಡರ್ಸ್‌ಗಳು ಶಾಲಾ ಮುಖ್ಯಸ್ಥರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 03 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ನಗರದ ಸದ್ಯೋಜಾತ ಮಠದಲ್ಲಿ ಆಯೋಜಿಸಿದ್ದ ಸಾವಯವ ಮೇಳದಲ್ಲಿ ಸೇವೆ ಸಲ್ಲಿಸಿದ್ದರು.

* ಸೆಪ್ಟೆಂಬರ್ 04 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಒಂದು ದಿನದ ಮಾಹಿತಿ ಶಿಬಿರವನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ನೆರವೇರಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭೇಟಿ ನೀಡಿ ಭಾಗವಹಿಸಿದ್ದ ಉಪನ್ಯಾಸಕರನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಕರಿಸಿದ್ದಪ್ಪ ಎಸ್.ಜಿ., ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀಮತಿ ಶಾರದಾ ಮಗಾನಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಶಿಬಿರದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ 93 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರವು ಅತ್ಯಂತ ಯಶಸ್ವಿಯಾಗಿ ನೆರವೇರಿತು.



* ಸೆಪ್ಟೆಂಬರ್ 05 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಶಿಕ್ಷಕರ ದಿನಾಚರಣೆಯನ್ನು ಶ್ರೀ ಸರ್ವಪಲ್ಲಿ ರಾಧಾಕೃಷ್ಣರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಆಚರಿಸಲಾಯಿತು.

* ಸೆಪ್ಟೆಂಬರ್ 06 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೃಷ್ಣಜನ್ಮಾಷ್ಟಮಿಯಂದು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಕೃಷ್ಣ ಮತ್ತು ರಾಧೆಯ ವೇಷಭೂಷಣ ತೊಟ್ಟು ಆಚರಿಸಿದರು.

* ಸೆಪ್ಟೆಂಬರ್ 06 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರಕೆರೆ ಇಲ್ಲಿ ಕಬ್ಸ್ ಮತ್ತು ಬುಲ್‌ಬುಲ್ಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಕೃಷ್ಣ ಮತ್ತು ರಾಧೆಯ ವೇಷಭೂಷಣ ತೊಟ್ಟು ಆಚರಿಸಿದರು.

* ಸೆಪ್ಟೆಂಬರ್ 06 ರಂದು ಅಕ್ಕಮಹಾದೇವಿ ಸಭಾಂಗಣದಲ್ಲಿ ಅಕ್ಕಮಹಾದೇವಿ ನೇತ್ರದಾನ ಪ್ರೇರಣಾ ಸಮಿತಿಯಿಂದ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮೋತಿ ವೀರಪ್ಪ ಪದವಿಪೂರ್ವ ಕಾಲೇಜು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್‌ಗಳು ಅತ್ಯುತ್ತಮ ಸೇವೆ ಸಲ್ಲಿಸಿದರು.

* ಸೆಪ್ಟೆಂಬರ್ 07 ರಂದು ಹರಿಹರ ಸ್ಥಳೀಯ ಸಂಸ್ಥೆ ವತಿಯಿಂದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕೆ.ಬಿ. ರಾಜಶೇಖರ್ ನೆರವೇರಿಸಿದರು. ತೀರ್ಪುಗಾರರಾಗಿ ಶ್ರೀಮತಿ ಶಾರದಾ ಮಾಗಾನಳ್ಳಿ, ಜಿಲ್ಲಾ ಗೈಡ್ ಆಯುಕ್ತರು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ.ಎಸ್.ಜಿ.ವಿ., ಶ್ರೀ ನವೀನ್, ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 08 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಕಬ್ಸ್ ಮತ್ತು ಬುಲ್‌ಬುಲ್ಸ್ ಮಕ್ಕಳ ಸಿಕ್ಸರ್ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀಮತಿ ಜಸ್ಟೀನ್ ಡಿಸೋಜ ಉಪಾಧ್ಯಕ್ಷರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರೇಖಾರಾಣಿ ಜಿಲ್ಲಾ ಸಹಾಯಕ ಆಯುಕ್ತರು ಗೈಡ್, ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ, ಶ್ರೀಮತಿ ಶಶಿಕಲಾ ಎಲ್.ಟಿ(ಗೈ) ಉಪಸ್ಥಿತರಿದ್ದರು.

* ಸೆಪ್ಟೆಂಬರ್ 09 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆ ವತಿಯಿಂದ ಗ್ರಾಮಾಂತರ ಹಿರಿಯ ಪ್ರಾಥಮಿಕ ಶಾಲೆ, ಸಂತೆಬೆನ್ನೂರು ಇಲ್ಲಿ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು.



* ಸೆಪ್ಟೆಂಬರ್ 09 ರಂದು ದಾವಣಗೆರೆ ಉತ್ತರವಲಯ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದೇಶ್ವರ ಆನಗೋಡು ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಕಬ್ಸ್, ಬುಲ್‌ಬುಲ್ಸ್ ಮಕ್ಕಳು ವಿಶೇಷ ವೇಷಭೂಷಣಗಳನ್ನು ತೊಟ್ಟು ಆಚರಿಸಿದರು.

* ಸೆಪ್ಟೆಂಬರ್ 09 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದಗಂಗಾ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಮಕ್ಕಳು ಕೃಷ್ಣ ಮತ್ತು ರಾಧೆಯ ವೇಷಧರಿಸಿ ಸಂಭ್ರಮಿಸಿದರು.

* ಸೆಪ್ಟೆಂಬರ್ 09 ರಂದು ದಾವಣಗೆರೆ ಉತ್ತರವಲಯ ಸ್ಥಳೀಯ ಸಂಸ್ಥೆಯ ನಂದಗೋಕುಲ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಶಾಲೆಯ ಬನ್ನೀಸ್, ಕಬ್ಸ್ ಮತ್ತು ಬುಲ್‌ಬುಲ್ಸ್ ಮಕ್ಕಳಿಗಾಗಿ ರಾಧಾಕೃಷ್ಣ ವೇಷಭೂಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

* ಸೆಪ್ಟೆಂಬರ್ 10 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ತರಳಬಾಳು ವಿದ್ಯಾ ಸಂಸ್ಥೆಯಲ್ಲಿ ಪರಿಸರ ಸ್ನೇಹಿ ಗಣಪತಿ ತಯಾರಿಕಾ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಅರಿಶಿಣ ಮತ್ತು ಮಣ್ಣಿನಿಂದ ಗಣಪತಿಯನ್ನು ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳ ಮಾರ್ಗದರ್ಶನದೊಂದಿಗೆ ತಯಾರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ವಿಜಯ್‌ಕುಮಾರ್ ಮತ್ತು ಶ್ರೀ ಶಶಿಕುಮಾರ್ ಸ್ಕೌಟ್ ಮಾಸ್ಟರ್, ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ಅನಿತಾ, ಗೈಡ್ ಕ್ಯಾಪ್ಟನ್ಸ್ ಮತ್ತು ಪೋಷಕರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 11 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಶ್ರೀ ಜಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ಬಿ.ಆರ್.ಸಿ ಮತ್ತು ಸಿ.ಆರ್.ಪಿ.ಗಳಿಗೆ ಮಾಹಿತಿ ಶಿಬಿರವನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾರದಾ ಮಗಾನಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ.ಎಸ್.ಜಿ.ವಿ., ಭಾಗವಹಿಸಿದ್ದರು. ಶ್ರೀ ಓಂಕಾರಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರವನ್ನು ಆಯೋಜಿಸಿದ್ದರು.

* ಸೆಪ್ಟೆಂಬರ್ 13 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದೇಶ್ವರ ಶಾಲೆ, ಆನಗೋಡು ಇಲ್ಲಿ ಪರಿಸರ ಸ್ನೇಹಿ ಗಣಪತಿ ತಯಾರಿಕಾ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಲಕ್ಷ್ಮಿಕಾಂತ್ ಜಿಲ್ಲಾ ಪರಿಸರ ಅಧಿಕಾರಿಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ ಭಾಗವಹಿಸಿದ್ದರು. ಶ್ರೀಮತಿ ಕವಿತಾ ಲೇಡಿ ಸ್ಕೌಟ್ ಮಾಸ್ಟರ್ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು.

* ಸೆಪ್ಟೆಂಬರ್ 13 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಜೇಡಿ ಮಣ್ಣು ಮತ್ತು ಅರಿಶಿಣದಿಂದ ಪರಿಸರ ಸ್ನೇಹಿ ಗಣಪತಿ ತಯಾರಿಕೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಶ್ರೀ ಕೊಟ್ರಯ್ಯ ಸ್ಕೌಟ್ ಮಾಸ್ಟರ್, ಶ್ರೀಮತಿ ಮಂಜುಳ ಗೈಡ್ ಕ್ಯಾಪ್ಟನ್ ಇವರ ಮಾರ್ಗದರ್ಶನದಲ್ಲಿ ಚಟುವಟಿಕೆಯಲ್ಲಿ ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಗಣಪತಿ ತಯಾರಿಕೆ ಬಗ್ಗೆ ಮಾಹಿತಿ ನೀಡಿದರು.

## ಧಾರವಾಡ

ಆಗಸ್ಟ್ 29 ರಂದು ನಡೆದ ಜಿಲ್ಲಾ ಮತ್ತು ತಾಲೂಕ ಪದಾಧಿಕಾರಿಗಳ ಸಭೆಯನ್ನು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ.ಎಂ. ಲೋಂಡೆ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿಕೊಂಡಿದ್ದರು, ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಗಜಾನನ ಮನ್ನಿಕೇರಿ, ವಿಭಾಗೀಯ ಉಪಾಧ್ಯಕ್ಷರು, ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ಇವರು ವಹಿಸಿಕೊಂಡಿದ್ದರು. ನಂತರ ಧಾರವಾಡ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಕೆ.ಬಿ. ಗುಡಸಿ, ಇವರನ್ನು ಭೇಟಿ ಮಾಡಿ ತಮ್ಮ ಅಧೀನದಲ್ಲಿ ಬರುವ ಎಲ್ಲ ಕಾಲೇಜುಗಳಲ್ಲಿ ರೋವರಿಂಗ್ ಮತ್ತು ರೇಂಜರಿಂಗ್ ಪ್ರಾರಂಭಿಸಲು ಮತ್ತು



ಮೀಸಲಾತಿಗಳನ್ನು ಕೋಡಲು ವಿನಂತಿಸಲಾಯಿತು. ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

* ಪಿ.ಯು. ಉಪನ್ಯಾಸಕರ ಪ್ರಾರಂಭಿಕ ಶಿಬಿರದಲ್ಲಿ 53 ಜನ ಉಪನ್ಯಾಸಕರುಗಳು ಭಾಗವಹಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾಗೇಶ ಶಿವಪೂರ, ಶ್ರೀ ಗಣಪತಿ ಎಂ., ರತ್ನ. ಎಂ., ಭಾಗವಹಿಸಿ ಪ್ರತಿಜ್ಞೆ ಮತ್ತು ನಿಯಮ, ನಾಲ್ಕು ಬಂದಕಗಳು, ಇತಿಹಾಸ, ಪ್ರಗತಿಪರ ತರಬೇತಿಗಳು ಮುಂತಾದವುದರ ಕುರಿತು ಮಾಹಿತಿ ನೀಡಿದರು. ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದರು.



## ಕಾರವಾರ (ಉ.ಕ.)

ಆಗಸ್ಟ್ 19 ರಂದು ಜಿಲ್ಲಾ ಸಂಸ್ಥೆ ಕಾರವಾರ ಸ್ಥಳೀಯ ಸಂಸ್ಥೆ ಕುಮಟಾ ಹಾಗೂ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ ಮೂರೂರು ಆಶ್ರಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಸ್ಕಾರ್ಫ್ ವಿತರಣೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕುಮಟಾ ಕಮಲಾ ಬಾಳಿಗ ಬಿ.ಎಡ್. ಕಾಲೇಜಿನ ಉಪನ್ಯಾಸಕರಾದ ಶ್ರೀ ಎಸ್.ಕೆ. ಭಟ್ಟ ವಿದ್ಯಾರ್ಥಿಗಳಿಗೆ ಸ್ಕಾರ್ಫ್ ವಿತರಿಸಿ, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ರಾಷ್ಟ್ರೀಯ ಪ್ರಜ್ಞೆ ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಕುರಿತು ಮನಮುಟ್ಟುವಂತೆ ಮಾತನಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಶಿಕ್ಷಕ ಶ್ರೀ ಮನೋಹರ ಹರಿಕಂತ್ರ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಹುತಾತ್ಮ ದೇಶಭಕ್ತರ ದೇಶಭಕ್ತಿಯ ಕಥೆಗಳ ಮೂಲಕ ದೃಷ್ಟಾಂತಗಳ ಮೂಲಕ ತಿಳಿಸಿ ಮಕ್ಕಳಲ್ಲಿ ರಾಷ್ಟ್ರಪ್ರೇಮ ಜಾಗೃತಗೊಳ್ಳುವಂತೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಾಧ್ಯಾಪಕರಾದ ಶ್ರೀ ವಿವೇಕ್ ಆಚಾರಿ ವಹಿಸಿದ್ದರು. ಶಾಲಾ ಸ್ಕೌಟ್ಸ್ ಶಿಕ್ಷಕರ ಶ್ರೀ ಜಿ.ಆರ್. ನಾಯ್ಕ ಪ್ರಾಸ್ತಾವಿಕ ನುಡಿಯೊಂದಿಗೆ ಕಾರ್ಯಕ್ರಮದ ಸದುದ್ದೇಶವನ್ನು ತೆರೆದಿಟ್ಟರು. ಶಾಲಾ ವಿದ್ಯಾರ್ಥಿಗಳು ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಸದ್ಭಾವನಾ ದಿನವನ್ನು ದಿ ನ್ಯೂ ಇಂಗ್ಲಿಷ್ ಪಿ.ಯು. ಕಾಲೇಜು ಭಟ್ಕಳ್ ಅಗ್ನಿ ರೋವರ್ಸ್ ವಿದ್ಯಾರ್ಥಿಗಳಿಂದ ಆಚರಿಸಲಾಯಿತು.

* ಆಗಸ್ಟ್ 19 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ಸದ್ಭಾವನಾ ದಿನಾಚರಣೆ ಆಚರಿಸಲಾಯಿತು. ಪ್ರಾಂಶುಪಾಲರಾದ ಶ್ರೀಮತಿ ಕಾಂತಿಭಟ್ ಈ ದಿನಾಚರಣೆಯ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀತಿ ಪ್ರತಿಜ್ಞಾವಿಧಿ ಬೋಧಿಸಿದರು. ವಿದ್ಯಾರ್ಥಿಗಳು ಸದ್ಭಾವನಾ ದಿನಾಚರಣೆ ಅಂಗವಾಗಿ ಭಾಷಣ ಮಾಡಿದರು.

* ಆಗಸ್ಟ್ 20 ರಂದು ಅಂಕೋಲಾ ಸ್ಥಳೀಯ ಸಂಸ್ಥೆಯಿಂದ ಸದ್ಭಾವನಾ ದಿನಾಚರಣೆ ಮಾಡಲಾಯಿತು. ಕಾರವಾರ ಜಿಲ್ಲೆ ಅಂಕೋಲ ತಾಲ್ಲೂಕು ಹಲಗೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ದಳಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಉತ್ತಮ ಸಮಾಜ ಸೇವೆ ಮಾಡಿದ ಗಣ್ಯರಿಗೆ ಗೌರವ ಅಭಿನಂದನೆ ಸಲ್ಲಿಸಲಾಯಿತು. ಸದ್ಭಾವನಾ ದಿನದ ಅಂಗವಾಗಿ ಸ್ಕೌಟ್–ಗೈಡ್ಸ್ ವಿದ್ಯಾರ್ಥಿಗಳಿಂದ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಡೆಲಾಯಿತು. ಹಾಗೂ ಅದನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಗೆ ಜವಾಬ್ದಾರಿ ವಹಿಸಿಕೊಟ್ಟರು.



* ಆಗಸ್ಟ್ 25 ರಂದು ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಮೇರಾ ಮಿಟ್ಟಿ ಮೇರಾ ದೇಶ್ ನಮ್ಮ ನಾಡಿನ ಮಣ್ಣು ಮತ್ತು ನೀರಿಗೆ ಪ್ರಾಮುಖ್ಯತೆ ನೀಡಿ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ಸ್ಕೌಟ್–ಗೈಡ್ಸ್ ಘಟಕದ ವತಿಯಿಂದ ಆಚರಿಸಲಾಯಿತು. ಮಕ್ಕಳು ತಮ್ಮ ತಮ್ಮ ಮನೆಯಿಂದ ಮಣ್ಣಿನ ಕಳಸ, ಹೂವು, ತೆಂಗಿನಕಾಯಿ, ಅರಿಶಿನ ಕುಂಕುಮ ತಂದು ತಾವೇ ಸ್ವತಃ ಈ ಕಾರ್ಯಕ್ರಮದ ತಯಾರಿ ನಡೆಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ ಮಾರ್ಗದರ್ಶನದಲ್ಲಿ ಗೈಡ್ ಕುಮಾರಿ ಚಿನ್ಮಯಿ ಹೆಗಡೆ ಕಾರ್ಯಕ್ರಮವನ್ನು ನಿರೂಪಿಸಿದರು. ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಈ ಆಚರಣೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ದೇಶ ಭಕ್ತಿ ಕುರಿತು ಭಾಷಣ,




ಹಾಡು ಪ್ರಸ್ತುತ ಪಡಿಸಿದರು. ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

* ದಿ ನ್ಯೂ ಇಂಗ್ಲಿಷ್ ಕಾಲೇಜಿನಲ್ಲಿ "ನನ್ನ ಮಣ್ಣು ನನ್ನ ದೇಶ" ಈ ಕಾರ್ಯಕ್ರಮದ ಅಂಗವಾಗಿ ಮಣ್ಣಿನ ಪೂಜೆ ಮಾಡಿ ಸ್ಥಳೀಯ ಸಂಸ್ಥೆಗೆ ಕಳಿಸಿ ಕೊಡಲಾಯಿತು. ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಕುಮಟಾ ಹಾಗೂ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆಯ ಭಗತ್ ಸಿಂಗ್ ಸ್ಕೌಟ್ಸ್ ಟ್ರೂಪ್, ಕಿತ್ತೂರು ರಾಣಿ ಚನ್ನಮ್ಮ ಗೈಡ್ಸ್ ಕಂಪನಿ ವತಿಯಿಂದ ಮೇರಾ ಮಿಟ್ಟಿ ಮೇರಾ ದೇಶ್ ಕಾರ್ಯಕ್ರಮವನ್ನು ಆಚರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಪಕರಾದ ಶ್ರೀ ವಿವೇಕ ಆಚಾರಿ, ದೈಹಿಕ ಶಿಕ್ಷಣ ಶ್ರೀ ಅರುಣ ನಾಯ್ಕ, ಸ್ಕೌಟ್ಸ್ ಶಿಕ್ಷಕ ಶ್ರೀ ಜಿ.ಆರ್. ನಾಯ್ಕ ಅವರ ಆಶಯ ನುಡಿಯಲ್ಲಿ ಕಾರ್ಯಕ್ರಮದ ಔಚಿತ್ಯವನ್ನು, ದೇಶದ ಬಗ್ಗೆ ಗೌರವ ಭಾವನೆಯನ್ನು ಮೂಡಿಸಿತು. ಕಾರ್ಯಕ್ರಮದಲ್ಲಿ ಶಾಲಾ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಶಿಕ್ಷಕರು ಪಾಲ್ಗೊಂಡು ದೇಶದ ಅಮೂಲ್ಯ ಸಂಪತ್ತಾದ ಮಣ್ಣನ್ನು ಗೌರವ ಭಾವನೆಯಿಂದ ಪೂಜಿಸಿ, ಹಿಡಿ ಮಣ್ಣನ್ನು ಕೈಯಲ್ಲಿ ಹಿಡಿದು ಪ್ರಾರ್ಥಿಸಿ, ಮಣ್ಣನ್ನು ಸಂಗ್ರಹಿಸಿ, ಜಿಲ್ಲಾ ಸಂಸ್ಥೆಯ ಮೂಲಕ ರಾಜ್ಯ ಸಂಸ್ಥೆಗೆ ಕಳುಹಿಸಿಕೊಡಲಾಯಿತು.



* ಆಗಸ್ಟ್ 25 ರಂದು ಜಿಲ್ಲಾ ಸಂಸ್ಥೆಗೆ ತಾಲ್ಲೂಕುಗಳಿಂದ ಕಳಿಸಿರುವ ನನ್ನ ಮಣ್ಣು ನನ್ನ ದೇಶ, "ಮೇರಾ ಮಿಟ್ಟಿ ಮೇರ ದೇಶ್" ಕಾರ್ಯಕ್ರಮದ ಅಂಗವಾಗಿ ನೀಡಿದ ಸಂಸ್ಥೆಗಳು ಮಣ್ಣನ್ನು ಸ್ವೀಕರಿಸಿ ಜಿಲ್ಲಾ ಸಂಸ್ಥೆಯಿಂದ ಕಳಸ ಮುಖಾಂತರ ರಾಜ್ಯ ಸಂಸ್ಥೆಗೆ ಕಳಿಸಲಾಯಿತು.



* ಆಗಸ್ಟ್ 26 ರಂದು ಸ್ಥಳೀಯ ಸಂಸ್ಥೆ ಕುಮಟಾದಲ್ಲಿ ತಾಲ್ಲೂಕು ಮಟ್ಟದ ಗೀತ ಗಾಯನ ಸ್ಪರ್ಧೆ ಕುಮಟಾ ತಾಲ್ಲೂಕಿನ ಡಯಟ್‌ನಲ್ಲಿ ನಡೆಯಿತು.

* ಆಗಸ್ಟ್ 26 ಜಿಲ್ಲಾ ಸಂಸ್ಥೆ ಕಾರವಾರ ಮತ್ತು ಸ್ಥಳೀಯ ಸಂಸ್ಥೆ ಹೊನ್ನಾವರದ ನೇತೃತ್ವದಲ್ಲಿ ಹೊನ್ನಾವರ ತಾಲ್ಲೂಕು ಮಟ್ಟದ ಗೀತ ಗಾಯನ ಸ್ಪರ್ಧೆ ಸ್ಥಳೀಯ ಇಂಗ್ಲೀಷ್ ಸ್ಕೂಲ್ ಹೊನ್ನಾವರದ ಸಭಾ ಭವನದಲ್ಲಿ

ಜರುಗಿತು. ನ್ಯೂ ಇಂಗ್ಲಿಷ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜಯಂತ್ ನಾಯ್ಕರವರು ತಮ್ಮ ಉದ್ಘಾಟನಾ ನುಡಿಯಲ್ಲಿ ಉದಾತ್ತ ಧ್ಯೇಯಗಳನ್ನು ಹೊಂದಿರುವ ಸ್ಕೌಟ್–ಗೈಡ್ಸ್‌ಗಳು ಪರಿಸರ ಅಂಶಗಳಾದ ನೆಲ, ಜಲ, ವಾಯು ಇತ್ಯಾದಿಗಳ ರಕ್ಷಣೆಗಾಗಿ ಪಣ ತೊಡಬೇಕು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಪರಿಸರ ಸ್ವಚ್ಛ ಸುಂದರವಾಗಿರುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ ಜಿಲ್ಲಾ ಗೈಡ್ ಆಯುಕ್ತರಾಗಿರುವ ಶ್ರೀಮತಿ ಶೋಭಾ ಕುಲಕರ್ಣಿಯವರು ಡಾ॥ ಗೊ.ರು. ಚನ್ನಬಸಪ್ಪನವರ ಹೆಸರಿನಲ್ಲಿ ನಡೆಯುತ್ತಿರುವ ಸ್ಕೌಟ್–ಗೈಡ್ಸ್‌ನ ಗೀತಾ ಗಾಯನ ಸ್ಪರ್ಧೆಯು ಗುಂಪು ಸ್ಪರ್ಧೆಯಾಗಿದ್ದು, ಸ್ಕೌಟ್–ಗೈಡ್ಸ್, ವಿಶ್ವಭ್ರಾತೃತ್ವಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ. ಸ್ಕೌಟ್–ಗೈಡ್ಸ್‌ಗಳಾದ ನಾವು ಹೃದಯ ವೈಶಾಲ್ಯತೆ ಹೊಂದಿರಬೇಕೆಂದು ತಿಳಿಸಿದರು. ವೇದಿಕೆಯಲ್ಲಿ ಜಿಲ್ಲಾ ಸಂಸ್ಥೆಯ ಖಜಾಂಚಿ ಶ್ರೀ ಜಿ.ಆರ್. ಮಡಿವಾಳರವರು ಉಪಸ್ಥಿತರಿದ್ದರು.



* ಆಗಸ್ಟ್ 5 ರಂದು ಜಿಲ್ಲಾ ಸಂಸ್ಥೆ ಕಾರವಾರ ಜಿಲ್ಲೆಯ ಭಟ್ಕಳ ಸ್ಥಳೀಯ ಶ್ರೀ ಮಂಜುನಾಥ ದೇವಾಡಿಗ ಸ್ಕೌಟ್ ಮಾಸ್ಟರ್, ಶ್ರೀಮತಿ ಪ್ರಿಯಾ ನಾಯ್ಕ್ ಲೇಡಿ ಸ್ಕೌಟ್ ಮಾಸ್ಟರ್, ಹೊನ್ನಾವರ ಸ್ಥಳೀಯ ಸಂಸ್ಥೆಯಿಂದ ಶ್ರೀಮತಿ ಸುರೇಖ ನಾಯ್ಕ್ ಫ್ಲಾಕ್ ಲೀಡರ್ ಹೆಚ್.ಡಬ್ಲ್ಯೂ.ಬಿ., ಶ್ರೀ ಮುರಳಿ ಸ್ಕೌಟ್ ಮಾಸ್ಟರ್, ಕುಮಟಾ ಸ್ಥಳೀಯ ಸಂಸ್ಥೆಯಿಂದ ಶ್ರೀ ವಿಜಯಕುಮಾರ್ ತಳವಾರ್ ಸ್ಕೌಟ್ ಮಾಸ್ಟರ್, ಶ್ರೀಮತಿ ಗೀತಾ ರಾವ್ ಗೈಡ್ ಕ್ಯಾಪ್ಟನ್, ಅಂಕೋಲಾ ಸ್ಥಳೀಯ ಸಂಸ್ಥೆಯಿಂದ ಶ್ರೀ ನಾಗರಾಜ ಸ್ಕೌಟ್ ಮಾಸ್ಟರ್ ಶ್ರೀಮತಿ ವಿನೋದ ಎಸ್. ನಾಯಕ್ ಗೈಡ್ ಕ್ಯಾಪ್ಟನ್ ಇವರುಗಳಿಗೆ ಗೌರವಿಸಲಾಯಿತು.

* ಶಿಕ್ಷಕರ ದಿನಾಚರಣೆಯ ಅಂಗವಾಗಿ ಹೊನ್ನಾವರದ ನ್ಯೂ ಇಂಗ್ಲಿಷ್ ಸ್ಕೂಲ್‌ನ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಡಾ॥ ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪ ರಂಗೋಲಿಯಿಂದ ಅಲಂಕಾರ ಮಾಡಿದರು. ಶಾಲೆಯ ವಿದ್ಯಾ ಪರಿಷತ್ ಕಾರ್ಯಕ್ರಮ ನಿರ್ವಹಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರಿಗೆ ಹೂ ನೀಡಿ ಮತ್ತು ಕೇಕ್ ಕತ್ತರಿಸಿ ವಂದನೆಗಳು ಸಲ್ಲಿಸಿದರು.

* ಸೆಪ್ಟೆಂಬರ್ 5 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯ ಸ್ಕೌಟ್–ಗೈಡ್ ಘಟಕದ ವತಿಯಿಂದ ಡಾ॥ ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ ಮಾಡುವುದರ ಮೂಲಕ ಶಿಕ್ಷಕರ ದಿನಾಚರಣೆಯನ್ನು ಆಚರಣೆ ಮಾಡಿದರು. ನಂತರ ವಿದ್ಯಾರ್ಥಿಗಳು ಶಿಕ್ಷಕರಿಗೆ ಪುಷ್ಪ ನೀಡಿ, ವಿವಿಧ ಮನರಂಜನಾ ಆಟಗಳನ್ನು ಆಯೋಜಿಸಿ, ವಿಜೇತರಾದವರಿಗೆ ಬಹುಮಾನ ನೀಡಿ ಗೌರವಿಸಿದರು.

* ಸೆಪ್ಟೆಂಬರ್ 8 ರಂದು ಜಿಲ್ಲಾ ಸಂಸ್ಥೆ ಶಿರಸಿ ಮತ್ತು ಕಾರವಾರ ಸಹಯೋಗದಲ್ಲಿ ಶಿರಸಿ ಮತ್ತು ಕಾರವಾರ ಶೈಕ್ಷಣಿಕ ಜಿಲ್ಲೆಗಳ ಸರಕಾರಿ ಅನುದಾನಿತ ಅನುದಾನ ರಹಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ, ಉಪನ್ಯಾಸಕಿಯರುಗಳಿಗೆ ಒಂದು ದಿನದ ರೋವರಿಂಗ್ ಮತ್ತು ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಿ.ಜಿ. ಸಭಾಹಿತ, ಜಿಲ್ಲಾ ಆಯುಕ್ತರು ಕಾರವಾರ ಇವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಪರಮೇಶ್ವರ ಭಂಡಾರಿ ಮಾನ್ಯ ಜಿಲ್ಲಾ ನೋಡಲ್ ಅಧಿಕಾರಿಗಳು ಡಯಟ್ ಕುಮಟಾ ಇವರು ಭಾಗವಹಿಸಿದ್ದರು. ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು ಸ್ಕೌಟ್ಸ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಾಲಚಂದ್ರ ಭಟ್, ಪ್ರಾಂಶುಪಾಲರು ಶ್ರೀ ಮಾರಿಕಾಂಬಾ ಸರಕಾರಿ ಪದವಿಪೂರ್ವ ಕಾಲೇಜು, ಶಿರಸಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಎಂ.ಎಂ. ಭಟ್, ಜಿಲ್ಲಾ ಮುಖ್ಯ ಆಯುಕ್ತರು, ಶಿರಸಿ, ಶ್ರೀ ವಿ.ಎಚ್. ಭಟ್ಕಳ, ಜಿಲ್ಲಾ ಆಯುಕ್ತರು (ಸ್ಕೌ) ಶಿರಸಿ, ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಆಯುಕ್ತರು (ಗೈ) ಕಾರವಾರ ಉಪಸ್ಥಿತರಿದ್ದರು. ಈ ಒಂದು ಪ್ರಾರಂಭಿಕ ಶಿಬಿರದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ 55 ಉಪನ್ಯಾಸಕ, ಉಪನ್ಯಾಸಕಿಯರು ಭಾಗವಹಿಸಿದ್ದರು. ನೋಂದಣಿ ಕಾರ್ಯಕ್ರಮದ ಪೂರ್ಣ ವ್ಯವಸ್ಥೆಯನ್ನು ಶ್ರೀ ಜಿ.ಆರ್. ಮಡಿವಾಳ, ಶ್ರೀಮತಿ ಬೇಬಿ ಪಡಿಯಾರ್, ಶ್ರೀಮತಿ ವನಿತಾ ನಾಯಕ್ ವಹಿಸಿದ್ದರು, ಶ್ರೀ ಪ್ರಭಾಕರ ಭಟ್ ಎಂ., ಎಸ್.ಒ.ಸಿ. (ಎಸ್) ಶಿಬಿರದ ನಾಯಕತ್ವ ವಹಿಸಿದ್ದರು. ಶ್ರೀ ವೀರೇಶ್ ತಾಂತ್ರಿಕ ವ್ಯವಸ್ಥೆ ಮಾಡಿದರು. ಶ್ರೀ ಕರಿಸಿದ್ದರ್ರ ಶಿಬಿರದ ವ್ಯವಸ್ಥೆ ಮಾಡಿದ್ದರು.



* ಸೆಪ್ಟೆಂಬರ್ 15 ರಂದು ವಿಶ್ವ ಕಡಲತೀರ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಎಂಟು ಗಂಟೆಗೆ ಕುಮಟಾ ತಾಲ್ಲೂಕು ಹೊನ್ನಳ್ಳಿ ಕಡಲ ತೀರದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಯಿತು. ಹೊನ್ನಾವರ ಕುಮಟಾ ಶಾಸಕರಾದ ಮಾನ್ಯ ಶ್ರೀ ದಿನಕರ ಶೆಟ್ಟಿ ಅವರ ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಡಿ.ಎಫ್.ಓ.ಆರ್.ಎಫ್.ಓ. ಹಾಗೂ ಕೋಸ್ಟಲ್ ಗಾರ್ಡ್ ಅಧಿಕಾರಿಗಳು, ಸಮಾಜ ಸೇವಕರು ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಇತರೆ ಸ್ವಯಂ ಸೇವಕರು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ಭಟ್ಕಳದ ಪುರವರ್ಗ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರದ ಸಂವಿಧಾನ ಪೀಠಿಕೆಯನ್ನು ಓದಿ ಪ್ರತಿಜ್ಞೆ ನೆರವೇರಿಸಲಾಯಿತು.

* ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಕಾಂತಿಭಟ್ ಇವರ ಉಪಸ್ಥಿತಿಯಲ್ಲಿ ನಮ್ಮ ರಾಷ್ಟ್ರದ ಸಂವಿಧಾನದ ಪೀಠಿಕೆಯನ್ನು ಓದಿ ಪ್ರತಿಜ್ಞಾ ವಿಧಿಯನ್ನು ನೆರವೇರಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 15 ರಂದು ನಮ್ಮ ರಾಷ್ಟ್ರದ ಸಂವಿಧಾನ ಪೀಠಿಕೆಯನ್ನು ಓದಿ ಪ್ರತಿಜ್ಞೆ ವಿಧಿಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಡಾ. ಜಿ.ಜಿ. ಸಭಾಹಿತ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ಆರ್. ಮಡಿವಾಳ ಕೋಶಾಧಿಕಾರಿ, ಶಾಲಾ ಮುಖ್ಯೋಪಾಧ್ಯಾಯರು ಶ್ರೀ ಮಂಜುನಾಥ, ಶ್ರೀಮತಿ ನಾಗವೇಣಿ ಪಟಗಾರ, ಸಿ.ಆರ್.ಪಿ.ಎಸ್.ಡಿ.ಎಂ.ಸಿ. ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಮಕ್ಕಳು ಪೋಷಕರು ಭಾಗವಹಿಸಿದ್ದರು.

* ಸೆಪ್ಟೆಂಬರ್ 15 ರಂದು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್-ಗೈಡ್ಸ್ ದಳನಾಯಕರುಗಳು ದೇಶಭಕ್ತಿ ಗೀತಗಾಯನ ಸ್ಪರ್ಧೆ ಕಾರವಾರ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಳದಿಪುರದ ಜಿ.ಎಂ.ಎಚ್.ಪಿ.ಎಸ್. ಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಶ್ರೀಮತಿ ನಾಗವಣಿ ಪಟಗಾರ್, ಶಿಕ್ಷಣ ಇಲಾಖೆಯಿಂದ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಅರುಣ ಹಬ್ಬು ಎಸ್.ಡಿ.ಎಂ.ಸಿ. ಅಧ್ಯಕ್ಷರು, ಶ್ರೀಮತಿ ರೇಣುಕಾ, ಗ್ರಾಮ ಪಂಚಾಯತ್ ಸದಸ್ಯರು, ಶ್ರೀ ಮಂಜುನಾಥ್ ಮೊಗೇರ ಮುಖ್ಯೋಪಾಧ್ಯಾಯರು, ಶ್ರೀ ಜಿ.ಕೆ. ಹೆಗಡೆ, ನಿವೃತ್ತ ಪ್ರಾಧ್ಯಾಪಕರು, ಶ್ರೀಮತಿ ಸುಲೋಚನ ಹೆಗಡೆ, ಶ್ರೀಮತಿ ರೇಖಾಭಟ್, ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ಆರ್. ಮಡಿವಾಳ್, ಜಿಲ್ಲಾ ಕೋಶಾಧಿಕಾರಿ, ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಹಾಗೂ ಸ್ಕೌಟ್-ಗೈಡ್ ಶಿಕ್ಷಕರುಗಳು, ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಶಿಕ್ಷಕರು ಭಾಗವಹಿಸಿದ್ದರು. ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಜಿ.ಆರ್. ಮಡಿವಾಳ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ನಾಗವೇಣಿ ಪಟಗಾರ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮುಖಾಂತರ ಉದ್ಘಾಟನೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಿ.ಜಿ. ಸಭಾಹಿತ್ ವಹಿಸಿದ್ದರು. ಇದೇ ದಿನ ಭಾಗವಹಿಸಿದ್ದ ಎಲ್ಲರೂ ಸಂವಿಧಾನ ಪೀಠಿಕೆಯನ್ನು ಪಠಣ ಮಾಡಿ ಪ್ರತಿಜ್ಞಾ ವಿಧಿ ಓದಲಾಯಿತು. ಕಾರ್ಯಕ್ರಮದಲ್ಲಿ ನಿರ್ಣಾಯಕರಾಗಿ ಶ್ರೀ ಜಿ.ಕೆ. ಹೆಗಡೆ, ಶ್ರೀಮತಿ ಸುಲೋಚನ ಹೆಗಡೆ, ಶ್ರೀಮತಿ ರೇಖಾಭಟ್ ಭಾಗವಹಿಸಿದ್ದರು. 80 ಸ್ಕೌಟ್-ಗೈಡ್, ಕಬ್-ಬುಲ್‌ಬುಲ್ ವಿದ್ಯಾರ್ಥಿಗಳು, 16 ಸ್ಕೌಟ್-ಗೈಡ್, ಕಬ್-ಬುಲ್‌ಬುಲ್ ಶಿಕ್ಷಕರು ಪೋಷಕರು ಶಾಲಾ ಸಿಬ್ಬಂದಿಗಳು ಭಾಗವಹಿಸಿದ್ದರು. ಶ್ರೀ ಕರಿಸಿದ್ದಪ್ಪ ಟಿ., ಎ.ಎಸ್.ಓ.ಸಿ. ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀಮತಿ ಸುರೇಖಾ ನಾಯಕ್ ವಂದಿಸಿದರು.

## ಕೋಲಾರ

ಆಗಸ್ಟ್ 20 ರಂದು ರಾಷ್ಟ್ರೀಯ ಸದ್ಭಾವನಾ ದಿನಾಚರಣೆ ಅಂಗವಾಗಿ ಪ್ರತಿಜ್ಞಾವಿಧಿ ಸ್ವೀಕರಿಸುವ ಮೂಲಕ ಆಚರಿಸಲಾಯಿತು.

* ಆಗಸ್ಟ್ 19 ರಂದು ಶ್ರೀ ದಾನಮ್ಮ ಚನ್ನಬಸವಯ್ಯ, ಪದವಿಪೂರ್ವ ಕಾಲೇಜು ಬಂಗಾರಪೇಟೆ ಶಾಖೆ ಇಲ್ಲಿ ನೂತನ ರೋವರ್ಸ್-ರೇಂಜರ್ಸ್ ಘಟಕಗಳನ್ನು ಉದ್ಘಾಟನಾ ಸಮಾರಂಭ ಮತ್ತು ರಾಷ್ಟ್ರೋದೋವೋಭವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಎಸ್.ಡಿ.ಸಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಂಗಾಧರ್‌ರವರು ಅಧ್ಯಕ್ಷತೆ ವಹಿಸಿದ್ದರು. ಈ ಸಂಧರ್ಭದಲ್ಲಿ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಆಗಸ್ಟ್ 04 ರಂದು ಶ್ರೀನಿವಾಸಪುರ ಸ್ಥಳೀಯ ಸಂಸ್ಥೆಯ ವಾರ್ಷಿಕ ಮಹಾಸಭೆ ಮತ್ತು ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಭಾಗ್ಯಲಕ್ಷ್ಮೀರವರು ಉದ್ಘಾಟಿಸಿ ಶುಭಹಾರೈಸಿದರು. ಡಯಟ್ ಉಪನ್ಯಾಸಕರಾದ ಶ್ರೀಗಂಗಪ್ಪರವರು ಅಧ್ಯಕ್ಷತೆಯನ್ನು ವಹಿಸಿದ್ದರು ಮತ್ತು ಮಾನ್ಯ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀಮತಿ ವಸಂತಮ್ಮ ಹಾಗೂ ಜಿಲ್ಲಾ ಮತ್ತು ಸ್ಥಳಿಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು. ಸುಮಾರು 22 ತಂಡಗಳು ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್ - ರೇಂಜರ್ಸ್ ಮುಂತಾದವರು ಭಾಗವಹಿಸಿ ಯಶಸ್ವಿಗೊಳಿಸಿದರು.

* ಸೆಪ್ಟೆಂಬರ್ 01 ರಿಂದ 03ರ ವರೆಗೆ ಕೋಲಾರ ಜಿಲ್ಲಾ ಸಂಸ್ಥೆಯ ವತಿಯಿಂದ ರೋವರ್ಸ್ - ರೇಂಜರ್ಸ್ ಮೇಟ್ ಶಿಬಿರವನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಜಿಲ್ಲೆಯ ವಿವಿಧ ಕಾಲೇಜುಗಳಿಂದ 40 ರೋವರ್ಸ್ ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 05 ರಂದು ಕೋಲಾರ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು.

* ಸೆಪ್ಟೆಂಬರ್ 05 ರಂದು ಕೋಲಾರ ಸ್ಕೌಟ್ ಭವನ, ಕೋಲಾರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೋಲಾರ ಮತ್ತು ರೋಟರಿ ಕೋಲಾರ ನಂದಿನಿ ಸಹಯೋಗದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ರವರು ಅಧ್ಯಕ್ಷತೆಯನ್ನು ವಹಿಸಿ ಯಶಸ್ವಿಗೊಳಿಸಿದರು.

* ಸೆಪ್ಟೆಂಬರ್ 08 ರಂದು ಮಾಲೂರು ಸ್ಥಳೀಯ ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಸ್ಕೌಟ್ ಭವನ ಮಾಲೂರು ಇಲ್ಲಿ ಆಯೋಜಿಸಲಾಗಿತ್ತು. ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀಮತಿ ಚಂದ್ರಕಳಾರವರು ಉದ್ಘಾಟಿಸಿ ಶುಭ ಹಾರೈಸಿದರು. ಪದಾಧಿಕಾರಿಗಳಾದ ಶ್ರೀ ಅಶ್ವತ್ ರೆಡ್ಡಿ, ಶ್ರೀ ನಂಜುಡಗೌಡ, ಶ್ರೀ ವಿಜಯ್ ಕುಮಾರ್, ಶ್ರೀ ಅಶ್ವತ್ ನಾರಾಯಣ ಹಾಗೂ ಮುಂತಾದವರು ಭಾಗವಹಿಸಿ ಶುಭಹಾರೈಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಮಾಜಿ ಕಾರ್ಯದರ್ಶಿ ಶ್ರೀ ರಾಜಪ್ಪ, ಹಾಲಿ ಕಾರ್ಯದರ್ಶಿ ಶ್ರೀ ಟಿ.ಎಂ. ವೆಂಕಟೇಶ್, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ., ಕೋಲಾರರವರು ಕಾರ್ಯಕ್ರಮ ಸಂಘಟಿಸಿ ಯಶಸ್ವಿಗೊಳಿಸಿದರು.



* ಸೆಪ್ಟೆಂಬರ್ 09 ರಿಂದ 15ರ ವರೆಗೆ ಸ್ಕೌಟ್ ಭವನ, ಕೋಲಾರ ಇಲ್ಲಿ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಮಾನ್ಯ ಉಪನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೋಲಾರ ರವರ ಸಹಕಾರ ಮತ್ತು ಮಾನ್ಯ ಶ್ರೀ ಕೆ.ವಿ. ಶಂಕರಪ್ಪ ಜಿಲ್ಲಾ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಸ್ಕೌಟ್ ವಿಭಾಗದಲ್ಲಿ 15 ಶಿಕ್ಷಕರು, ಗೈಡ್ ವಿಭಾಗದಲ್ಲಿ 16 ಶಿಕ್ಷಕಿಯರು, ಫ್ಲಾಕ್ ವಿಭಾಗದಲ್ಲಿ 10 ಶಿಕ್ಷಕಿಯರು ಸೇರಿದಂತೆ ಒಟ್ಟು 41 ಜನ ಮೂಲ ತರಬೇತಿ ಪಡೆದರು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಜಿಮ್ಮಿ ಸಿಕ್ವೇರಾ, ಕೊಡಗು ಜಿಲ್ಲೆ, ಗೈಡ್ ವಿಭಾಗಕ್ಕೆ ಶ್ರೀಮತಿ ಎಸ್.ಪಿ. ಭಾರತಿ, ಫ್ಲಾಕ್ ವಿಭಾಗಕ್ಕೆ ಶ್ರೀಮತಿ ಗೌರಬಾಯಿರವರು ಭಾಗವಹಿಸಿ ಕರ್ತವ್ಯ ನಿರ್ವಹಿಸಿದರು. ತರಬೇತಿ ಶಿಬಿರಕ್ಕೆ ಜಿಲ್ಲಾ ಸಂಸ್ಥೆ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಭಾಗವಹಿಸಿ ಶುಭ ಹಾರೈಸಿದರು.




* ಸೆಪ್ಟೆಂಬರ್ 15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಕೋಲಾರ ಜಿಲ್ಲಾಡಳಿತ ಮತ್ತು ಸಮಾಜ ಕಲ್ಯಾಣ ವತಿಯಿಂದ ಆಯೋಜಿಸಿದ ನಗರದ  ಭಾರತದ ಸಂವಿಧಾನ ಪೀಠಿಕೆ ಓದುವ ಮತ್ತು ಜಾಥ ಕಾರ್ಯಕ್ರಮಕ್ಕೆ ಮಾನ್ಯ ಸಂಸದರು ಮತ್ತು ಶಾಸಕರು ಜಿಲ್ಲಾ ಮಟ್ಟದ ಅಧಿಕಾರಿಗಳು ಚಾಲನೆ ನೀಡಿದರು. ವಿವಿಧ ಶಾಲೆಗಳ ಸ್ಕೌಟ್ಸ್ ರೋವರ್ಸ್ ವಿದ್ಯಾರ್ಥಿಗಳು ಭಾಗವಹಿಸಿದರು. ಈ ಸಂದರ್ಭದಲ್ಲಿ ಭಾರತದ ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಕೋಲಾರ ಜಿಲ್ಲಾ ಸಂಸ್ಥೆಯ ವತಿಯಿಂದ ಕಾರ್ಯಕ್ರಮ ಸಂಘಟಿಸಲಾಗಿತ್ತು.

* ಸೆಪ್ಟೆಂಬರ್ 15 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ ಇಲ್ಲಿ ರೋವರ್ಸ್ ರೇಂಜರ್ಸ್ ಘಟಕಗಳಿಂದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ  ಮತ್ತು ಉದ್ಯೋಗ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಕಾರ್ಯಕ್ರ,ಮವನ್ನು ರೇಂಜರ್ ಲೀಡರ್ ಶ್ರೀಮತಿ ಜ್ಯೋತಿ ಎಸ್., ಮತ್ತು ರೋವರ್ ಲೀಡರ್ ಶ್ರೀ ಮುನಿಸ್ವಾಮಿಗೌಡ, ಸಂಘಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಸೆಪ್ಟೆಂಬರ್ 16 ಮತ್ತು 17 ರಂದು ಜಿಲ್ಲೆಯ ವಿವಿಧ ಶಾಲೆ ಕಾಲೇಜುಗಳಲ್ಲಿ ಅರಿಶಿನ ಗಣಪತಿ ಮತ್ತು ಪರಿಸರ ಸ್ನೇಹಿ ಗಣೇಶ ಅಭಿಮಾನ ಮಾಡಲಾಯಿತ್ತು. ಕಬ್ಸ್-ಬುಲ್ ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಮೂಲಕ ಕಾರ್ಯಕ್ರಮಗಳು ಸಂಘಟಿಸಲಾಯಿತು.

* ಸೆಪ್ಟೆಂಬರ್ 16 ರಂದು ಕೋಲಾರ ನಗರದ ಚಿನ್ಮಯ ವಿದ್ಯಾಲಯ ಕೋಲಾರ ಇಲ್ಲಿ ನೂತನವಾಗಿ ಕಬ್ಸ್, ಬುಲ್‌ಬುಲ್ ಘಟಕಗಳನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರು, ಮುಖ್ಯ ಶಿಕ್ಷಕರು, ಜಿಲ್ಲಾ & ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದರು.

## ಕೊಪ್ಪಳ

ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಗುನ್ನಳ್ಳಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇಲ್ಲಿ ಜುಲೈ 31 ರಿಂದ ಆಗಸ್ಟ್ 6ರ ವರೆಗೆ ಕಲಬುರ್ಗಿ ವಿಭಾಗ ಮಟ್ಟದ ಶಿಕ್ಷಕ ಶಿಕ್ಷಕಿಯವರಿಗೆ ಮೂಲ ತರಬೇತಿ ಶಿಬಿರವನ್ನು ಜರುಗಿಸಲಾಯಿತು. ಶಿಬಿರದಲ್ಲಿ ಏಳು ಜಿಲ್ಲೆಗಳಿಂದ ಸ್ಕೌಟ್ಸ್ ವಿಭಾಗದಲ್ಲಿ 129 ಜನ, ಗೈಡ್ಸ್ ವಿಭಾಗದಲ್ಲಿ 89 ಜನ ಹೀಗೆ ಒಟ್ಟು 217 ಜನ ಶಿಕ್ಷಕರು ತರಬೇತಿಯಲ್ಲಿ ಭಾಗವಹಿಸಿರುತ್ತಾರೆ. ಸ್ಕೌಟ್ ವಿಭಾಗಕ್ಕೆ ಶಿಬಿರದ ನಾಯಕರಾಗಿ ಶ್ರೀ ಬಾಬುರಾವ್ ನಿಂಬೂರೆ ಎಲ್.ಟಿ.(ಎಸ್.), ಬೀದರ್, ಶ್ರೀ ಶ್ರೀಕಾಂತ ಮಾಸಗಟ್ಟೆ ಎ.ಎಲ್.ಟಿ.(ಎಸ್) ಕೊಪ್ಪಳ, ಶ್ರೀ ನಟರಾಜ ಎ.ಎಲ್.ಟಿ.(ಎಸ್.) ಬಳ್ಳಾರಿ, ಕೊಟ್ರೇಶ್ ಗೌಡ ಎ.ಎಲ್.ಟಿ.(ಎಸ್.) ವಿಜಯನಗರ ಗೈಡ್ಸ್ ವಿಭಾಗದಲ್ಲಿ ನಾಯಕಿಯರಾಗಿ ಶ್ರೀಮತಿ ಅರುಣಾ ವಸ್ತ್ರದ ಎ.ಎಲ್.ಟಿ.(ಜಿ.) ಕೊಪ್ಪಳ, ಶ್ರೀಮತಿ ಶುಭಾ ಎ.ಎಲ್.ಟಿ.(ಜಿ) ಕಲಬುರ್ಗಿ ಕಾರ್ಯನಿರ್ವಹಿಸಿರುತ್ತಾರೆ. ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಪ್ರಧಾನ ಆಯುಕ್ತರು ಶಿಬಿರದಲ್ಲಿ ಭಾಗವಹಿಸಿದ್ದ ಶಿಕ್ಷಕರ ಶಾಲಾ ವಿದ್ಯಾರ್ಥಿಗಳಿಗೆ 22 ಜೊತೆ ಸಂಪೂರ್ಣ ಸಮವಸ್ತ್ರಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಶ್ರೀ ಹೆಚ್.ಎಂ. ಸಿದ್ರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಕೊಪ್ಪಳ ಶ್ರೀ ಸಿ.ಬಿ. ಪಾಟೀಲ್ ಓಕಳೆ ಕಲ್ಯಾಣ ಕರ್ನಾಟಕ ವಿಭಾಗದ ಸ್ಕೌಟ್ಸ್ ಆಯುಕ್ತರು ಜಿಲ್ಲೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಬಿರದಲ್ಲಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳ ಸಮವಸ್ತ್ರ ವಿತರಣೆಯಲ್ಲಿ ಶ್ರೀಮತಿ ಮಲ್ಲೇಶ್ವರಿ ಜೂಜಾರೆ ಕಲ್ಯಾಣ ಕರ್ನಾಟಕ ಉಸ್ತುವಾರಿಗಳು ಸಮರ್ಪಕವಾಗಿ ವಿತರಣೆಗೆ ಸಹರಿಸಿದರು.






## ಮೈಸೂರು

ದಿ. ಮಾಜಿ ಪ್ರಧಾನ ಮಂತ್ರಿ ಶ್ರೀ ರಾಜೀವ್ ಗಾಂಧಿ ಜಯಂತಿ ಅಂಗವಾಗಿ ಜಿಲ್ಲಾ ಸಂಸ್ಥೆಯಲ್ಲಿ "ಸದ್ಭಾವನ ದಿನಾಚರಣೆ"ಯ ಅಂಗವಾಗಿ ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜಿಸಲಾಗಿತ್ತು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಸುಜಯ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಸ್ಥಾನಿಕ ಆಯುಕ್ತರು, ಜಿಲ್ಲಾ ಸಂಘಟಕರುಗಳಾದ ಶ್ರೀ ಆರ್.ಪಿ. ಚಂದ್ರು ಮತ್ತು ಶ್ರೀ ಕೆ. ರಾಮಪ್ರಸಾದ್ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರಜಿನಿ ಸ್ಕೌಟ್ಸ್-ಗೈಡ್ಸ್ ಗುಂಪು, ಪ್ರೀಮಿಯರ್ ಮುಕ್ತ ದಳ, ಪ್ರಗತಿ ಗೈಡ್ ಗುಂಪು, ಪ್ಯಾರಡೈಸ್ ಸ್ಕೌಟ್ ಗುಂಪಿನ ಕಬ್-ಬುಲ್‌ಬುಲ್ ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್, ಸ್ಕೌಟರ್ ಮತ್ತು ಗೈಡರ್‌ಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಬೇಡನ್ ಪೋವೆಲ್ ಶಾಲೆ, ಮೈಸೂರು ಇಲ್ಲಿ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಎಸ್. ಸುಜಯ, ಜಿಲ್ಲಾ ಜಂಟಿ ಕಾರ್ಯದರ್ಶಿಯವರಿಗೆ ಬೇಡನ್ ಪೋವೆಲ್ ಶಾಲೆ ವತಿಯಿಂದ ಸನ್ಮಾನವನ್ನು ಮಾಡಲಾಯಿತು.



* ಸೆಪ್ಟೆಂಬರ್ 9 ರಂದು ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್-ಗೈಡ್ಸ್ ಭವನ, ಮೈಸೂರು ಇಲ್ಲಿ ಮೈಸೂರು ಜಿಲ್ಲಾ ಸಂಸ್ಥೆಯ ಎಲ್ಲಾ ದಳ ನಾಯಕರುಗಳಿಗೆ "ಗೀತ ಗಾಯನ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

* ಸೆಪ್ಟೆಂಬರ್ 10 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಪರಿಸರ ಗಣಪತಿಯನ್ನು ಮಾಡುವ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರುಗಳಾದ ಶ್ರೀ ಎಂ.ಎನ್. ಸುರೇಶ್ ಕುಮಾರ್, ಶ್ರೀಮತಿ ಶಶಿಕಲಾ, ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಸಂಘಟಕರಾದ ಶ್ರೀ ಆರ್.ಪಿ. ಚಂದ್ರು ಮತ್ತು ಶ್ರೀ ರಾಮ ಪ್ರಸಾದ್ ಉಪಸ್ಥಿತರಿದ್ದರು. 75 ಕಬ್, ಬುಲ್‌ಬುಲ್, ಸ್ಕೌಟ್ಸ್-ಗೈಡ್, ರೋವರ್-ರೇಂಜರ್ ಮಕ್ಕಳು ಈ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.



## ರಾಯಚೂರು

ಆಗಸ್ಟ್ 01 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಸ್ಕಾರ್ಫ್ ಡೇ ಹಾಗೂ ಸೂರ್ಯೋದಯ ದಿನಾಚರಣೆಯನ್ನು ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳು ಹಾಗೂ ಶಾಲಾ-ಕಾಲೇಜುಗಳಲ್ಲಿ ಆಯೋಜನೆ ಮಾಡಲಾಯಿತು.

* ಆಗಸ್ಟ್ 12 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಲಿಂಗಸುಗೂರು ಮತ್ತು ಶ್ರೀ ಶಿವಲಿಂಗಯ್ಯ ಕಲ್ಮಠ ಸ್ಮಾರಕ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ,ಕಸಬಾ ಲಿಂಗಸುಗೂರು ತಾ: ಲಿಂಗಸುಗೂರು ಹಾಗೂ ಚೈತನ್ಯ ಮಾಡಲ್ ಟೆಕ್ನೋ ಶಾಲೆ, ಕಸಬಾ ಲಿಂಗಸುಗೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀಮತಿ ಬಸವರಾಜೇಶ್ವರಿ ಮಾಚಾಲಿ, ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಬೇಸಿಗೆ ಶಿಬಿರದ ಸ್ಕರ್ಫ್, ಓಗಲ್ ಹಾಗೂ ಪ್ರಮಾಣ ಪತ್ರಗಳ ವಿತರಿಸುವ ಕಾರ್ಯಕ್ರಮ ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಘಟಕಗಳ ಉದ್ಘಾಟನಾ ಸಮಾರಂಭ ಆಯೋಜನೆ ಮಾಡಲಾಯಿತು. ನಂತರ ಶ್ರೀಮತಿ ದುರುಗಮ್ಮ, ಗೈಡ್ ಕ್ಯಾಪ್ಟನ್ ಇವರು ಎಲ್ಲರನ್ನೂ ಸ್ವಾಗತಿಸಿದರು. ನಂತರ ಪ್ರಾಸ್ತಾವಿಕವಾಗಿ ಶ್ರೀಮತಿ ಮಹಿಬೂಬ್ ಫ್ಲಾಕ್ ಲೀಡರ್ ಇವರು ಮಾತನಾಡಿದರು. ನಂತರ ಶ್ರೀಮತಿ ಮಲ್ಲೇಶ್ವರಿ ಜೂಜರೇ, AROC/ ರೇಂಜರಿಂಗ್ ವಿಭಾಗ/ಕಲ್ಯಾಣ ಕರ್ನಾಟಕ ಉಸ್ತುವಾರಿ ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಜಯಪ್ರಕಾಶ್ ರೆಡ್ಡಿ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು/ ಅಜೀವ ಸದಸ್ಯರು ಜಿಲ್ಲಾ ಸಂಸ್ಥೆ ರಾಯಚೂರು, ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಇತ್ತೀಚೆಗೆ ಮೂಲ ತರಬೇತಿ ಪಡೆದ ದಳನಾಯಕರ ಘಟಕಗಳ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ನೀಡಲಾಯಿತು. ಹಾಗೂ 2022-23ನೇ ಸಾಲಿನಲ್ಲಿ ಆಯೋಜನೆ ಮಾಡಿದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಉಚಿತವಾಗಿ ಸ್ಕರ್ಫ್ ಓಗಲ್ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಶ್ರೀಮತಿ ಶಿವಲೀಲಾ, ಗೈಡ್ ಕ್ಯಾಪ್ಟನ್ ಇವರ ಎಲ್ಲರಿಗೂ ವಂದನೆಗಳನ್ನು ಹೇಳಿದರು. ಶ್ರೀಮತಿ ಲಕ್ಷ್ಮೀ, ಫ್ಲಾಕ್ ಲೀಡರ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.



* ಆಗಸ್ಟ್ 12 ರಂದು ಜಿಲ್ಲಾ ಸಂಸ್ಥೆ ವತಿಯಿಂದ 2022-23ನೇ ಸಾಲಿನಲ್ಲಿ ಆಯೋಜನೆ ಮಾಡಿದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಕಬ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಶಾಲೆಯ ಮುಖ್ಯಗುರು/ ಪ್ರಾಂಶುಪಾಲರು ಹಾಗೂ ಸ್ಕೌಟರ್-

ಗೈಡರ್‌ರವರಿಗೆ ರಾಜ್ಯ ಸಂಸ್ಥೆಯಿಂದ ನೀಡಿದ ಸ್ಕಾರ್ಫ್, ಓಗಲ್ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸುವ ಕಾರ್ಯಕ್ರಮವನ್ನು ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಲ್ಲೇಶ್ವರಿ ಜೂಜರೇ, ASOC/ ರೇಂಜರಿಂಗ್ ವಿಭಾಗ/ ಕಲ್ಯಾಣ ಕರ್ನಾಟಕ ಉಸ್ತುವಾರಿ, ಶ್ರೀ ಜಯಪ್ರಕಾಶ್ ರೆಡ್ಡಿ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು/ ಅಜೀವ ಸದಸ್ಯರು ಜಿಲ್ಲಾ ಸಂಸ್ಥೆ ರಾಯಚೂರು, ಶ್ರೀಮತಿ ಎಸ್. ದಾನಮ್ಮ, ಜಿಲ್ಲಾ ಖಜಾಂಚಿಗಳು, ಶ್ರೀ ಟಿ. ಶರಣಪ್ಪ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಲಿಂಗಸುಗೂರು, ಶ್ರೀ ಶಶಿಕಾಂತ್ ದೇಸಾಯಿ ALT ರಾಜ್ಯ ಪರಿಷತ್ ಸದಸ್ಯರು (ಸ್ಕೌ), ಶ್ರೀಮತಿ ಗಂಗಮ್ಮ ಕಟ್ಟಿಮನಿ, ಗೈಡ್ ಕ್ಯಾಪ್ಟನ್‌ರವರು ಆಗಮಿಸಿದ್ದರು.



* ಆಗಸ್ಟ್ 15 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ಸ್ಕೌಟ್ ಭವನ ರಾಯಚೂರು ಇಲ್ಲಿ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು, ಧ್ವಜಾರೋಹಣವನ್ನು ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ಇವರು ನೇರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ, ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಎಸ್. ದಾನಮ್ಮ, ಜಿಲ್ಲಾ ಖಜಾಂಚಿಗಳು, ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಗಣೇಶ, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ./ ಎಸ್.ಎಮ್.ವಿ., ಶ್ರೀ ವೆಂಕಟೇಶ ನಾಯಕ, ಸ್ಕೌಟ್ ಮಾಸ್ಟರ್ ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಆಗಸ್ಟ್ 20 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ವತಿಯಿಂದ ಶ್ರೀ ಬಿ. ಬಲರಾಮಕೃಷ್ಣ ಅಧ್ಯಕ್ಷರು ಸ್ಥಳೀಯ ಸಂಸ್ಥೆ ಮಾನ್ವಿರವರ ಅಧ್ಯಕ್ಷತೆಯಲ್ಲಿ ಕಲ್ಮಠಶಾಲೆ, ಮಾನ್ವಿ ಇಲ್ಲಿ "ಸದ್ಭಾವನಾ ದಿನಾಚರಣೆ ಹಾಗೂ ತಾಲ್ಲೂಕು ಮಟ್ಟದ ದೇಶ ಭಕ್ತಿ ಗೀತಾ ಗಾಯನ ಸ್ಪರ್ಧೆ ಮತ್ತು ಸ್ಕೌಟರ್-ಗೈಡರ್ ಸಮಾವೇಶವನ್ನು" ಆಯೋಜನೆ ಮಾಡಲಾಯಿತು. ಶ್ರೀ ನರಸಿಂಹಮೂರ್ತಿ ದೇಸಾಯಿ, ಜಂಟಿ ಕಾರ್ಯದರ್ಶಿಗಳು ಇವರು ಎಲ್ಲರನ್ನೂ ಸ್ವಾಗತಿಸಿದರು. ತದನಂತರ ಶ್ರೀಮತಿ ಎಂ. ರಾಮಲಿಂಗಪ್ಪ, ಕಾರ್ಯದರ್ಶಿಗಳು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಮಂಜುನಾಥ ಕಮಂತರ್ ಮುಖ್ಯ ಗುರು ಕಲ್ಮಠ ಶಾಲೆ ಮಾನ್ವಿ ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ



ಶ್ರೀಮತಿ ಯು. ಅನುರಾಧ ಗೈಡ್ಸ್ ಕ್ಯಾಪ್ಟನ್/ ಪ್ರಾಂಶುಪಾಲರು ಇವರು ಆಗಮಿಸಿದ್ದರು. ನಂತರ ಶ್ರೀ ಹಮ್ಮದ್ ಹುಸೇನಿ ಸ್ಕೌಟ್ಸ್ ಮಾಸ್ಟರ್ ಇವರು ಸದ್ಭಾವನಾ ದಿನಾಚರಣೆ ಅಂಗವಾಗಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ನಂತರ ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ ಮಕ್ಕಳಿಗೆ "ದೇಶ ಭಕ್ತಿ ಗೀತ ಗಾಯನ ಸ್ಪರ್ಧೆ"ಗಳನ್ನು ಏರ್ಪಡಿಸಲಾಯಿತು. ವಿಜೇತರಾದ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಪರಿಮಳಾ Pre-ALT (G), ಶ್ರೀಮತಿ ವಸುಂಧರಾ ಫ್ಯಾಕ್ಲೀಡರ್, ಶ್ರೀ ವಿಶ್ವನಾಥ ಗೌಡ, ಸ್ಕೌಟ್ಸ್ ಮಾಸ್ಟರ್ ಹಾಗೂ ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಹಾಗೂ ಸ್ಕೌಟರ್-ಗೈಡರ್‌ರವರು ಉಪಸ್ಥಿತರಿದ್ದರು. ಶ್ರೀ ಉದಯಕುಮಾರ್ ಪತ್ತಾರ್ ಸ್ಕೌಟ್ ಮಾಸ್ಟರ್‌ರವರು ಎಲ್ಲರಿಗೂ ವಂದಿಸಿದರು. ಹಾಗೂ ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ.ರವರು ಕಾರ್ಯಕ್ರಮವನ್ನು ನಿರೂಪಿಸಿದರು.

* ಆಗಸ್ಟ್ 25ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸ್ಕೌಟ್ಸ್ ಭವನ, ರಾಯಚೂರು ಇಲ್ಲಿ "ಮೇರಾ ಮಿಟ್ಟಿ ಮೇರಾ ದೇಶ" ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಜಿಲ್ಲೆಯ ವಿವಿಧ ಶಾಲಾ-ಕಾಲೇಜುಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಮಣ್ಣನ್ನು ಪೂಜಿಸಿ ಕಳಸದೊಂದಿಗೆ ಕಳಿಸಿದ ಮಣ್ಣನ್ನು ಜಿಲ್ಲಾ ಸಂಸ್ಥೆ ರಾಯಚೂರು ಕಾರ್ಯಾಲಯದಲ್ಲಿ ಎಲ್ಲರೂ ಕಳಿಸಿದ ಮಣ್ಣನ್ನು ಪೂಜಿಸಿ ಕಳಸದೊಂದಿಗೆ ರಾಜ್ಯ ಸಂಸ್ಥೆ ಕೇಂದ್ರ ಕಾರ್ಯಾಲಯ, ಬೆಂಗಳೂರಿಗೆ ಕಳಿಸಲಾಯಿತು. ಕಬ್ಸ್, ಬುಲ್-ಬುಲ್ಸ್, ಸ.ಉರ್ದು. ಪ್ರೌ.ಶಾಲೆ, ಅರಬ್ಮೊಹಲ್ಲಾ ರಾಯಚೂರು ಶಾಲೆಯ ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ. ಎಲ್ಲರಿಗೂ ವಂದಿಸಿ ಕಾರ್ಯಕ್ರಮವನ್ನು ನಿರೂಪಿಸಿದರು.



* ಆಗಸ್ಟ್ 26 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಶಾಂತಿ ನಿಕೇತನ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ "ಪರಿಸರ ಸ್ನೇಹಿ ಗಣೇಶ" ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಕಬ್-ಬುಲ್‌ಬುಲ್ಸ್, ಸ್ಕೌಟ್ಸ್, ಮಕ್ಕಳು ಮಣ್ಣಿನಿಂದ ಗಣೇಶನನ್ನು ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಅನುರಾಧ ಪ್ರಾಂಶುಪಾಲರು / ಗೈಡ್ಸ್ ಕ್ಯಾಪ್ಟನ್, ಕು. ಕುಸುಮ ಲೇಡಿ ಕಬ್ ಮಾಸ್ಟರ್, ಕು. ಉಮಾ ಫ್ಲಾಕ್ ಲೀಡರ್ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 02 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನ, ರಾಯಚೂರು ಇಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳುರವರ ಮಾರ್ಗದರ್ಶನದಲ್ಲಿ "ಚತುರ್ಥ ಚರಣ್ ಕಬ್ಸ್, ಹಿರಕ್‌ಪಂಕ್ ಬುಲ್-ಬುಲ್ಸ್" ಮಕ್ಕಳ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಈ ಶಿಬಿರದ ಕಬ್ ವಿಭಾಗದ ನಾಯಕರಾಗಿ ಶ್ರೀ ಚಂದ್ರಶೇಖರ, Pre-ALT, ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಶ್ರೀಮತಿ ವಿದ್ಯಾ, ALT(B) ಕಾರ್ಯವನ್ನು ನಿರ್ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕರಿಬಸಪ್ಪ ಹಂಚಿನಾಳ ಗದಗ, ಶ್ರೀ ಸೀತಾರಾಮ, ಶ್ರೀ ಶರಣಪ್ಪ ಗದಗಿನರವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀ ನರಸಿಂಹಮೂರ್ತಿ ದೇಸಾಯಿ, ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ನಾಗರತ್ನ ದೇಸಾಯಿ ಮುಖ್ಯಗುರುಗಳು, ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು, Pre-ALT (ಗೈ), ಶ್ರೀಮತಿ ಕವಿತಾ, HWB(G) ಜಿಲ್ಲಾ ಗಣತಿ ಸಂಯೋಜಕರು ಹಾಗೂ ಕಬ್ಸ್ 55, ಬುಲ್‌ಬುಲ್ಸ್ 57 ಮಕ್ಕಳು ಭಾಗವಹಿಸಿದ್ದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ. ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.



* ಸೆಪ್ಟೆಂಬರ್ 05 ರಂದು ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸನ್ಮಾನ್ಯ ಡಾ॥ ಎಸ್. ಶಿವರಾಜ ಪಾಟೀಲ್, ಶಾಸಕರು ರಾಯಚೂರು ನಗರ ಇವರ ಅಧ್ಯಕ್ಷತೆಯಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರು ಇಲ್ಲಿ 2023-24ನೇ ಸಾಲಿನ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣನಿಧಿ, ಶಿಕ್ಷಕರ ಸದನ ಬೆಂಗಳೂರು ಇವರ ವತಿಯಿಂದ ನೀಡುವ "ರಾಯಚೂರು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ"ಗೆ ಆಯ್ಕೆಯಾದ ಭಾರತ್ ಸ್ಕೌಟ್-ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರಿನ ಶ್ರೀಮತಿ ಗಂಗಮ್ಮ ಕಟ್ಟಿಮನಿ ಸಹಾಯಕ ಜಿಲ್ಲಾ ಆಯುಕ್ತರು (ಗೈ) ಶ್ರೀ ಅಮರೇಶ್ವರ ಬಾಲಕಿಯರ ಪ್ರೌಢ ಶಾಲೆ ಲಿಂಗಸುಗೂರು, ಕು. ಮುತ್ತಕ್ಕ ಬೇವಿನಹಳ್ಳಿ ದೈ.ಶಿ. ALT(G) ಸಹಾಯಕ ಜಿಲ್ಲಾ ಆಯುಕ್ತರು (ಗೈ) ಸಿಂಧನೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ದಢೇಸುಗೂರು ತಾ: ಸಿಂಧನೂರು, ಶ್ರೀ ಈಶ್ವರಪ್ಪ ಮಲ್ಲಾಡದ ಕಬ್ ಮಾಸ್ಟರ್ ಉ.ಸ.ಹಿ.ಪ್ರಾ. ಶಾಲೆ ಗೋನ ವಾಟ್ಲ ತಾಂಡಾ ತಾ: ಲಿಂಗಸುಗೂರುರವರಿಗೆ ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ರಾಯಚೂರು ಮತ್ತು ಸ್ಥಳೀಯ ಸಂಸ್ಥೆಗಳ ವತಿಯಿಂದ ತುಂಬು ಹೃದಯದ ಅಭಿನಂದನೆಗಳು.

* ಸೆಪ್ಟೆಂಬರ್ 06 ರಂದು ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಲಿಂಗಸಗೂರು ವತಿಯಿಂದ ಡಾ. ಗೊ.ರು. ಚನ್ನಬಸಪ್ಪನವರ ಹೆಸರಲ್ಲಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತೆ/ಜಾನಪದ ಗೀತ ಗಾಯನ ಸ್ಪರ್ಧೆಯನ್ನೂ ತಾಲ್ಲೂಕು ಗುರು ಭವನದಲ್ಲಿ ಏರ್ಪಡಿಸಲಾಗಿತು.

* ಸೆಪ್ಟೆಂಬರ್ 09 ರಂದು ಸ್ಥಳೀಯ ಸಂಸ್ಥೆ ಮಸ್ಕಿ ಹಾಗೂ ಲಯನ್ಸ್ ಕ್ಲಬ್ ಮಸ್ಕಿ ಇವರುಗಳು ಸಂಯುಕ್ತಾಶ್ರಯದಲ್ಲಿ ಗೀತೆಗಾಯನ ಸ್ಪರ್ಧೆಯು ನೆರವೇರಿತು. ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ॥ ಮಲ್ಲಿಕಾರ್ಜುನ ಇತ್ಲಿ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ನರಸರೆಡ್ಡಿ, ಮುಖ್ಯಾಧಿಕಾರಿಗಳು ಪುರಸಭೆ ಮಸ್ಕಿ. ಲಯನ್ಸ್ ಕ್ಲಬ್ ಅವರ ಅಧ್ಯಕ್ಷರಾದ ಡಾ॥ ಬಿ.ಹೆಚ್. ದಿವಟರ್, ಡಾ॥ ಶಿವಶರಣಪ್ಪ ಇತ್ಲಿ, ಹಾಗೂ ಲಿಂಗಸಗೂರು ತಾಲ್ಲೂಕು ದೈಹಿಕ ಶಿಕ್ಷಣ ಪರೀವೀಕ್ಷಕರಾದ ಶ್ರೀ ಚನ್ನಬಸವರಾಜ ಮೇಟಿ, ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಲತಾ ಮಸ್ಕಿ, ಶ್ರೀ ಬಸವರಾಜ ಬನ್ನಿಗಿಡ ಸಾ॥ ರಂಗಾಪೂರ, ಈ ಕಾರ್ಯಕ್ರಮದಲ್ಲಿ BEST GUIDES TEACHER'S AWARD ಪಡೆದ ಶ್ರೀಮತಿ ನಿರ್ಮಾಲಾ ಹಿರೇಮಠ, ಶ್ರೀಮತಿ ವಾಸಂತಿ ಸಹ ಶಿಕ್ಷಕಿ ಸರ್ಕಾರಿ ಪ್ರೌಢ ಶಾಲೆ ಬಳಗಾನೂರ, ರಾಜ್ಯ ಪ್ರಶಸ್ತಿ ಪಡೆದ ಶ್ರೀ ಬಸವರಾಜ ಯಾತಗಿರಿ ಶ್ರೀ ಬಸವೇಶ್ವರ ಪ್ರೌಢ ಶಾಲೆ ಬಳಗಾನೂರ, ಜಿಲ್ಲಾ ಪ್ರಶಸ್ತಿ ಪಡೆದ ಶ್ರೀಮತಿ ಗಂಗಮ್ಮ ಕಟ್ಟಿಮನಿ ಶ್ರೀ ಅಮರೇಶ್ವರ ಪ್ರೌಢಶಾಲೆ ಲಿಂಗಸಗೂರು ಇವರನ್ನು ಸಂಸ್ಥೆವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಸ್ವಾಗತವನ್ನು ಕು. ವೈಷ್ಣವಿ ಮಾರುತಿ ನಿರೂಪಣೆಯನ್ನು ಶ್ರೀಮತಿ ವಿದ್ಯಾವತಿ ವನಕಿ ಮು.ಗು. ಮತ್ತು ಕು. ಸೃಷ್ಟಿ ನೆರವೇರಿಸಿದರು. ಪ್ರಶಸ್ತಿ ಪತ್ರ ವಿತರಣೆ ಬಸತರಾಜ ಸ್ಕೌಟ್ಸ್ ಮತ್ತು ಗೈಡ್ಸ್ ನೇರವೇರಿಸಿದರು. ವಂದನಾರ್ಪಣೆಯನ್ನು ಶ್ರೀ ದೇವಪ್ಪ ಕಬ್ ಮಾಸ್ಟರ್ ನೇರವೇರಿಸಿದರು.



* ಸೆಪ್ಟೆಂಬರ್ 11 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ದೇವದುರ್ಗ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದೇವದುರ್ಗ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ದೇವದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಶ್ರೀ ತಿರುಪತಿ ಸೂಗುರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ದೇವದುರ್ಗ ಇವರ ಅಧ್ಯಕ್ಷತೆಯಲ್ಲಿ ಕನ್ಯಾ ಪ್ರೌಢ ಶಾಲೆ ದೇವದುರ್ಗ ಇಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಸುಖದೇವ್ ಹೆಚ್., ಕ್ಷೇತ್ರ ಶಿಕ್ಷಣಾಧಿಕಾರಿಗಳು ದೇವದುರ್ಗರವರು ಆಗಮಿಸಿದ್ದರು ಹಾಗೂ ಅತಿಥಿಗಳಾಗಿ ಶ್ರೀ ಶಿವರಾಜ್ ಪೂಜಾರ್, ಕ್ಷೇತ್ರ ಸಮನ್ವಯಧಿಕಾರಿಗಳು, ಶ್ರೀ ಎಂ.ವಿ. ಕವಡಿಮಟ್ಟಿ ತಾಲ್ಲೂಕು ದೈಹಿಕ ಶಿಕ್ಷಣ ಅಧಿಕಾರಿಗಳು, ಶ್ರೀ ಹನುಮಂತರಾಯ ಶಾಖೆ ಅಧ್ಯಕ್ಷರು ತಾಲ್ಲೂಕು ನೌಕರರ ಸಂಘ, ಶ್ರೀ ಬಾಲಪ್ಪ ಬಾವಿಮನಿ, ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ ದೇವದುರ್ಗ, ಶ್ರೀ ಶರಣಗೌಡ ಮುಖ್ಯ ಗುರುಗಳುರವರು ಆಗಮಿಸಿದ್ದರು ಶ್ರೀ ಮಲ್ಲಪ್ಪ ಕುಂಬಾರ್, ಸಹಾಯಕ ಮುಖ್ಯ ಆಯುಕ್ತರು ರಾಯಚೂರು, ಶ್ರೀ ರಂಗನಾಥ ಚಲವಾದಿ, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ದೇವದುರ್ಗ ಹಾಗೂ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 14 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸ್ಕೌಟ್ಸ್ ಭವನ, ರಾಯಚೂರು ಇಲ್ಲಿ "ಜಿಲ್ಲಾ ಮಟ್ಟದ ದೇಶಭಕ್ತಿ/ ಜಾನಪದ ಗೀತಾಗಾಯನ ಸ್ಪರ್ಧೆಯನ್ನು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ಸ್ಕೌಟರ್-ಗೈಡರ್‌ರವರಿಗೆ ಆಯೋಜನೆ ಮಾಡಲಾಯಿತು. ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರುರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಶ್ರೀ ಪರುಶುರಾಮ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು, ಜಂಟಿ ಕಾರ್ಯದರ್ಶಿಗಳು (ಸ್ಕೌ) ಜಿಲ್ಲಾ ಸಂಸ್ಥೆ ರಾಯಚೂರುರವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಮು ಪೇರಿಟಾಲ್, ಅಧ್ಯಕ್ಷರು, ಶ್ರೀ ಬಾಷಾ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು, ರಾಯಚೂರು, ಶ್ರೀಮತಿ ದಾನಮ್ಮ, ಜಿಲ್ಲಾ ಖಜಾಂಚಿಗಳು, ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ವಿಶ್ವನಾಥ ಗೌಡ, ಸ್ಕೌಟ್ಸ್ ಮಾಸ್ಟರ್‌ರವರು ಎಲ್ಲರಿಗೂ ವಂದಿಸಿದರು ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ಎಸ್.ಎಮ್.ಸಿ.ರವರು ಕಾರ್ಯಕ್ರಮವನ್ನು ಸಂಘಟಿಸಿ ನಿರೂಪಿಸಿದರು.

* ಸೆಪ್ಟೆಂಬರ್ 15 ರಂದು ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರು ಹಾಗೂ ಅಧ್ಯಕ್ಷರು, ಜಿಲ್ಲಾ ಸಂಸ್ಥೆ ರಾಯಚೂರು ರವರ ನೇತೃತ್ವದಲ್ಲಿ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣ, ರಾಯಚೂರು ಇಲ್ಲಿ "ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ" ಯನ್ನು ಆಯೋಜನೆ ಮಾಡಲಾಯಿತು. ನಂತರ ಮಾನ್ಯ ಸಚಿವರು ಎಲ್ಲರಿಗೂ ಭಾರತದ ಸಂವಿಧಾನ ಪೂರ್ವ ಪೀಠಿಕೆಯನ್ನು ವಾಚನ ಮಾಡಿದರು. ಈ ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ನಗರದ ವಿವಿಧ ಶಾಲಾ-ಕಾಲೇಜುಗಳ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ಸ್ಕೌಟರ್-ಗೈಡ್ಸ್ ಹಾಗೂ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಪದಾಧಿಕಾರಿಗಳು, ಎಸ್.ಜಿ.ವಿ/ ಎಸ್.ಎಮ್.ಸಿ.ರವರು ಭಾಗವಹಿಸಿದ್ದರು.

* ಸೆಪ್ಟೆಂಬರ್ 17 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನ, ರಾಯಚೂರು ಇಲ್ಲಿ "ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯನ್ನು" ಆಚರಿಸಲಾಯಿತು. ಧ್ವಜಾರೋಹಣವನ್ನು ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಎಸ್. ದಾನಮ್ಮ, ಜಿಲ್ಲಾ ಖಜಾಂಚಿಗಳು, ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ, ಶ್ರೀ ವೆಂಕಟೇಶ ನಾಯಕ ಸ್ಕೌಟ್ಸ್ ಮಾಸ್ಟರ್ ರವರು ಭಾಗವಹಿಸಿದ್ದರು.

## ರಾಮನಗರ

ರಾಮನಗರ ಡಯಟ್ ಆವರಣದಲ್ಲಿ ಪರಿಸರ ಸ್ನೇಹಿ ಗಣೇಶ ತಯಾರಿ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಕೃಷ್ಣಪ್ಪ ಎಸ್., ರಾಮನಗರ ಸ್ಥಳೀಯ ಕಾರ್ಯದರ್ಶಿಗಳು ಹಾಗೂ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಪ್ರೇಮ ಬಿ.ಸಿ., ಮತ್ತು ಸ್ಕೌಟ್ಸ್ ಮಾಸ್ಟರ್ ಶ್ರೀ ಅರ್ಜುನ್ ಚೌಹಾಣ್, ಶ್ರೀ ಮನು, ಜಿಲ್ಲಾ ಸಂಘಟಕ, ಹಾಗೂ ಜಿ.ಕೆ.ಎಂ.ಪಿ.ಎಸ್. ಶಾಲೆ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಗ್ರಾಮಾಂತರ ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಶ್ರೀ ಅಶೋಕ್ ಆರ್.ರವರು ಸೆಪ್ಟೆಂಬರ್ 15 ರಂದು ಶ್ರೀ ಎಸ್. ಕರಿಯಪ್ಪ ರೋವರ್ ಮತ್ತು ರೇಂಜರ್ ಘಟಕದ ವತಿಯಿಂದ ಸಮುದಾಯ ಸೇವಾ ಶಿಬಿರವನ್ನು ಹಮ್ಮಿಕೊಂಡಿದ್ದರು. ಎಸ್. ಕರಿಯಪ್ಪರವರ ಸೇವಾ ವಿಡಿಯೋ ಚಿತ್ರೀಕರಣ ತುಣುಕನ್ನು ತೋರಿಸಲಾಯಿತು. ನಂತರ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಜೀವನದ ಮೈಲುಗಲ್ಲುಗಳನ್ನು ತೋರಿಸುವ ಕಿರು ವೀಡಿಯೊ ಚಿತ್ರೀಕರಣ ತುಣುಕನ್ನು ತೋರಿಸಲಾಯಿತು. ನಂತರ ಆರ್.ಇ.ಎಸ್. ಸಂಘ ಸದಸ್ಯರು ಎಲ್ಲಾ ಗುರುವೃಂದವರಿಗೆ ಸ್ವಾಗತ ಕೋರಿದರು. ರೋವರ್ ಲೀಡರ್ ಅಶೋಕ್ ಆರ್ ರವರು ಸದರಿ ಶಿಬಿರದ ಬಗ್ಗೆ ಪ್ರಸ್ತಾವಿಕ ನುಡಿ ಹೇಳಿದರು. ನಂತರ ಉದ್ಘಾಟನೆ ನೆರವೇರಿಸಿದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮಾತನಾಡಿದರು. "ಆರ್.ಇ.ಎಸ್. ಸಂಸ್ಥೆಯ ಒಂದು ವಿಶ್ವ





ವಿದ್ಯಾಲಯದ ಸ್ಥಾಪನೆ ಮಾಡಲು ಅವಕಾಶವನ್ನು ನಮ್ಮ ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಕನಕಪುರ ತಾಲ್ಲೂಕಿನ ಎಂ.ಎಲ್.ಎ. ಶ್ರೀ ಡಿ.ಕೆ. ಶಿವಕುಮಾರ ಮತ್ತು ಶ್ರೀ ಡಿ.ಕೆ. ಸುರೇಶ್ ರವರು ಸಹಕಾರದಿಂದ ನಡೆಯಲಿದೆ ಎಂದರು. ನಂತರ ಸೆಪ್ಟೆಂಬರ್ 15 ರಂದು ಅಂತರ ರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ ಅಂಗವಾಗಿ ಭಾರತ ರತ್ನ ಸಂವಿಧಾನದ ಶಿಲ್ಪ ಮಹಾನ್ ಮಾನವತಾವಾದಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನ ಪೀಠಿಕೆಯನ್ನು ಓದುವುದರ ಮೂಲಕ ಎಲ್ಲಾ ಪ್ರತಿಜ್ಞೆಯನ್ನು ಸ್ವೀಕರಿಸಿದರು". ನಂತರ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ ರವರು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮತ್ತು ತಮ್ಮ ಜೀವನದ ಅನುಭವ ಹಂಚಿಕೊಂಡರು. ನಂತರ ಅಧ್ಯಕ್ಷತೆ ವಹಿಸಿದ ಶ್ರೀ ಹೆಚ್.ಕೆ. ಶ್ರೀಕಂಠು ಗ್ರಾಮ ವಿದ್ಯಾ ಪ್ರಚಾರಕ ಸಂಘ ಕನಕಪುರ ಅವರು ಎಸ್. ಕರಿಯಪ್ಪ ರವರು 1930ರಲ್ಲಿ ಶಾಲೆಯಲ್ಲಿ ಪ್ರಾರಂಭ ಕುರಿತು ಮಾತನಾಡಿದರು.

* ಸೆಪ್ಟೆಂಬರ್ 15 ರಂದು ರಾಮನಗರ ಜಿಲ್ಲೆಯ ಕನಕಪುರ ಸ್ಥಳೀಯ ದಯಾನಂದ ವಸತಿ ವಿದ್ಯಾಲಯ ಪ್ರಾಥಮಿಕ ಪಾಠಶಾಲಾ ಕಬ್ ಮಾಸ್ಟರ್ ರವರು ತಮ್ಮ ಶಾಲೆಯಲ್ಲಿ ಮುಖ್ಯ ಗುರುಗಳ ನೇತೃತ್ವದಲ್ಲಿ ಕಬ್ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮೂಲಕ ಭಾರತ ರತ್ನ ಸಂವಿಧಾನದ ಶಿಲ್ಪ ಮಹನ್ ಮಾನವತಾವಾದಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ ರಚಿತ ಭಾರತ ಸಂವಿಧಾನದ ಅಂತರರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ ಅಂಗವಾಗಿ ಸಂವಿಧಾನದ ಪೀಠಿಕೆಯನ್ನು ಓದುವುದರ ಮೂಲಕ ಪ್ರತಿಜ್ಞೆ ಸ್ವೀಕರಿಸಿದರು.




* ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಸೆಪ್ಟೆಂಬರ್ 01 ರಂದು "ದೇಶ ಭಕ್ತಿ ಗೀತ ಗಾಯನ" ಕಾರ್ಯಕ್ರಮದ ಹಾಗೂ ಜಾನಪದ ಗೀತೆ ಸ್ಪರ್ಧೆಯನ್ನು ಕನಕಪುರ ತಾಲ್ಲೂಕಿನ ಬಿ.ಆರ್.ಸಿ. ಕೇಂದ್ರ ಸಿ.ಡಬ್ಲ್ಯೂ.ಎಸ್.ಎನ್. ಕೊಠಡಿಯಲ್ಲಿ ಶ್ರೀ ಗೋಪಾಲ್ ವೈ ಕಾಂಬಳೆ ಕನಕಪುರ ಸ್ಥಳೀಯ ಕಾರ್ಯದರ್ಶಿ ಹಾಗೂ ಬಿ.ಆರ್.ಸಿ. ಶ್ರೀ ಶಿವಣ್ಣ ಮತ್ತು ಶ್ರೀ ಶ್ರೀನಿವಾಸ ಇಸಿಓ (ಆಯುಕ್ತರ ತರಬೇತಿದಾರರು)ರವರ ಸಹಯೋಗದೊಂದಿಗೆ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪರವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.



* ರಾಮನಗರ ಜಿಲ್ಲೆಯ ಮಾಗಡಿ ಸ್ಥಳೀಯ ಸಂಸ್ಥೆಯ ವತಿಯಿಂದ ಸೆಪ್ಟೆಂಬರ್ 12 ರಂದು ವಿನ್ನರ್ ಇಂಟರ್ ನ್ಯಾಷನಲ್ ಸ್ಕೂಲ್ ಮಾಗಡಿ ಟೌನ್‌ನಲ್ಲಿ "ದೇಶ ಭಕ್ತಿ ಗೀತಾ ಗಾಯನ" ಕಾರ್ಯಕ್ರಮ ಹಾಗೂ ಜಾನಪದ ಗೀತೆ ಮತ್ತು ಚಿತ್ರ ಕಲಾ ಸ್ಪರ್ಧೆಯನ್ನು ಕಬ್ ಮತ್ತು ಬುಲ್‌ಬುಲ್ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದವರು ತಾಲ್ಲೂಕಿನ ದೈಹಿಕ ಶಿಕ್ಷಣ ಪರಿವೀಕ್ಷಕ ಶಿಕ್ಷಣ ಇಲಾಖೆ ಮಾಗಡಿ, ಸಿ.ಆರ್.ಸಿ. ಮತ್ತು ಆಯುಕ್ತರ ತರಬೇತುದಾರರ ಮಾಗಡಿ, ಶಿಕ್ಷಣ ಇಲಾಖೆ ಶಿಕ್ಷಕ ಸಂಘದ ಗೌರವಾನ್ವಿತರು.

## ವಿಜಯಪುರ

ವಿಜಯಪುರ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಸ್ಕೌಟ್-ಗೈಡ್ ಮೂಲ ತರಬೇತಿ ಶಿಬಿರವನ್ನು ಆಗಸ್ಟ್ 7 ರಿಂದ ಸೆಪ್ಟೆಂಬರ್ 13ರ ವರೆಗೆ ಸ್ಥಳ ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ ತಾಲ್ಲೂರು ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಆಯ್.ಎಸ್. ಕಾಳಪ್ಪನವರು "ಮಕ್ಕಳನ್ನು ದೇಶದ ಜವಾಬ್ದಾರಿ ಪ್ರಜೆಗಳನ್ನಾಗಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಅದಕ್ಕಾಗಿ



ತಾವೆಲ್ಲ ಶ್ರಮಿಸಬೇಕು" ಎಂದು ತಿಳಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಕೌಟ್ ವಿಭಾಗದ ಶಿಬಿರದ ನಾಯಕರಾದ ಶ್ರೀ ಜಗದೀಶ್ ಬೋಳಸೂರ ಎ.ಎಲ್.ಟಿ.(ಸ್ಕೌ)ರವರು ಸ್ಕೌಟಿಂಗ್ ಬೆಳೆದುಬಂದ ಹೆಜ್ಜೆಗಳನ್ನು ಸ್ಮರಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಗೈಡ್ಸ್ ಆಯುಕ್ತರಾದ ಶ್ರೀಮತಿ ವಿದ್ಯಾವತಿ ಅಂಕಲಗಿರವರು "ಒಬ್ಬ ವ್ಯಕ್ತಿ ಎಷ್ಟೇ ಉತ್ತುಂಗಕ್ಕೇರಿದರೂ ಆದ ಶ್ರೇಯಸ್ಸು ಆತನ ಶಿಕ್ಷನಿಗೆ ಸಲ್ಲುತ್ತದೆ" ಎಂದು ಹೇಳಿದರು. ಜಿಲ್ಲಾ ಸಹಕಾರ್ಯದರ್ಶಿಗಳಾದ ಶ್ರೀ ಶರಣು ಸಬರದರವರು ಮಾತನಾಡಿ "ಸ್ಕೌಟ್ ಗೈಡ್ ಚಟುವಟಿಕೆಗಳು ಪ್ರತಿ ಮಗುವಿಗೂ ತಲುಪಬೇಕು ಎಲ್ಲರಿಗೂ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿದೆ" ಎಂದರು. ಸಮಾರಂಭದಲ್ಲಿ ಸ್ಕೌಟರ್ ರಾಜ್ಯ ಪ್ರತಿನಿಧಿಗಳಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಡಿ.ಎಲ್. ಪಿಂಜಾರ್, ಗೈಡ್ ವಿಭಾಗದ ಶಿಬಿರ ನಾಯಕಿ ಶ್ರೀಮತಿ ಕಾತ್ಯಾಯಿನಿ ಎಲ್.ಟಿ.(ಗೈ), ಸಹನಾಯಕರಾದ ಶ್ರೀ ಜೆ.ಐ. ಇಂಗಳೇಶ್ವರ, ಜಿಲ್ಲಾ ಸಂಘಟನಾ ಶಿಕ್ಷಕರಾಗಿ ಶ್ರೀ ಎಸ್.ಎಸ್. ಸೊಲಾಪೂರ ಮುಂತಾದವರು ಉಪಸ್ಥಿತರಿದ್ದರು. ಶ್ರೀ ರಾಜಶೇಖರ ಖೇಡಗಿ ಸರ್ವರನ್ನು ಸ್ವಾಗತಿಸಿ ವಂದಿಸಿದರು.

* ಅಜಾದಿಕಾ ಅಮೃತ ಮಹೋತ್ಸವದ ಅಂಗವಾಗಿ 'ಮೇರಾ ಮಿಟ್ಟಿ ಮೇರಾ ದೇಶ್' ನಮ್ಮ ನಾಡಿನ ಮಣ್ಣು ಮತ್ತು ನೀರಿಗೆ ಪ್ರಾಮುಖ್ಯತೆ ನೀಡಿ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಜಿಲ್ಲಾ ಸಂಸ್ಥೆಯಿಂದ ಜಿಲ್ಲೆಯ ಎಲ್ಲ ತಾಲ್ಲೂಕಿನ ಮಣ್ಣನ್ನು ಸಂಗ್ರಹಿಸಿ ಆಗಸ್ಟ್ 25 ರಂದು ಸ್ಕೌಟ್ ಭವನದ ಜಿಲ್ಲಾ ಕಾರ್ಯಾಲಯದಲ್ಲಿ ಜಿಲ್ಲಾ ಪದಾಧಿಕಾರಿಗಳ ಸಮ್ಮುಖದಲ್ಲಿ ಮಾನ್ಯ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರಿಯವರು ಮಣ್ಣಿನ ಕಳಶಕ್ಕೆ ಪೂಜೆ ಸಲ್ಲಿಸಿ ಬೀಳ್ಕೊಟ್ಟರು. ಜಿಲ್ಲಾ ಸ್ಕೌಟರ್ ರಾಜ್ಯ ಪ್ರತಿನಿಧಿಗಳಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿಯವರು ಮಾತನಾಡಿ ಮೇರಾ ಮಿಟ್ಟಿ ಮೇರಾ ದೇಶ್ ಅಭಿಯಾನದಿಂದ ಇಂದಿನ ಯುವಕರಲ್ಲಿ ನಮ್ಮ ಮಣ್ಣಿನ ಮಹತ್ವ ಮತ್ತು ಫಲವತ್ತತೆಯ ಬಗ್ಗೆ ಜಾಗೃತಿ ಮೂಡಲಿದೆ ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದೆ ಎಂದು ಹೇಳಿದರು.





# ನಿಪಾಹ ವೈರಾಣು

**ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ**
ಮಕ್ಕಳ ಹೃದಯ ತಜ್ಞರು, ಬೆಂಗಳೂರು

ತೊಗಲು ಬಾವಲಿಗಳಿಂದ ಮನುಷ್ಯರಿಗೆ ಹರಡುವ ನಿಪಾಹ ವೈರಾಣು ಅತೀ ಭಯಂಕರ ಮತ್ತು ಅದರ ಪರಿಣಾಮ ಅತ್ಯಂತ ಭಯಾನಕ. ಒಂದು ಕಾಲಕ್ಕೆ ರೋಗಾಣುಗಳಿಗೆ ಜನರು ಹೆದರುತ್ತಿದ್ದರು. ಆದರೆ Antibiotic ಬಂದ ಮೇಲೆ ರೋಗಾಣುಗಳ ಮೇಲೆ ಜಯ ಸಾಧಿಸಿದೆವು ಎಂದು ಬೀಗುತ್ತಿದ್ದ ಮನುಷ್ಯರಿಗೆ ಈಗ ವೈರಾಣುಗಳ ಹೈರಾಣ ಮಾಡುತ್ತಿವೆ. ಈ ಹಿಂದೆ Adenovirus ನಿಂದ ಬರುವ ನೆಗಡಿ, ಕೆಮ್ಮು ಮತ್ತು Influenzaಗೆ ಜನರು ಸುಸ್ತಾಗುತ್ತಿದ್ದರು. ಹುಲಿಗೆ ಹುಣ್ಣು ಹುಟ್ಟಿದಂತೆ ಆಡುತ್ತಿದ್ದರು. ಆದರೆ ಅದರಿಂದ ಯಾರೂ ಸಾಯುತ್ತಿರಲಿಲ್ಲ. ಔಷಧಿ ಕೊಟ್ಟರೆ ಒಂದುವಾರ, ಇಲ್ಲದಿದ್ದರೆ 2 ದಿನ ನೆಗಡಿ ಇರುವುದೆಂದು ನಗಾಡುತ್ತಿದ್ದ ನರರಿಗೆ ಈ H1, N1, ನಂತರ ಕೊರೊನಾ. ಈಗ ನಿಪಾಹ ವೈರಾಣು ಜನರಲ್ಲಿ ಭಯ ಹುಟ್ಟಿಸುತ್ತಿದೆ. ಇದು ಉತ್ತರ ಪೂರ್ವ ಆಫ್ರಿಕಾ ಮತ್ತು ದಕ್ಷಿಣ ಪೂರ್ವ ಏಷಿಯಾದಿಂದ ಈಗ ಭಾರತದ ಕೇರಳದಲ್ಲಿ ಹುಟ್ಟಿದೆ ಎಂಬ ಸುದ್ದಿ ಆತಂಕಕಾರಿಯಾಗಿದೆ. ಕೇರಳದಲ್ಲಿ ಈಗ ಜ್ವರ ಬಂದ ಪ್ರತಿಯೊಬ್ಬರನ್ನು ಪರೀಕ್ಷಿಸಲಾಗುತ್ತದೆ. 2001–07ರಲ್ಲಿ ಬಾಂಗ್ಲಾದೇಶದಿಂದ ಪಶ್ಚಿಮ ಬಂಗಾಲಕ್ಕೆ ಈ ವೈರಾಣು ಹಬ್ಬಿತ್ತು 70% ಸೋಕಿತರು ಸಾಯುತ್ತಾರೆಂದು ಕಂಡು ಬಂದಿದೆ. ಈ ವೈರಾಣುವಿನಿಂದ ಸೋಂಕಿತರಾದವರಿಗೆ ಜ್ವರ, ತಲೆನೋವು, ಕೆಮ್ಮು, ಗಂಟಲುನೋವು, ಉಸಿರಾಟದ ತೊಂದರೆ, ವಾಂತಿ ಉಂಟಾಗಿ ಸುಸ್ತಾಗುತ್ತಾರೆ. ಈ ಮಾರಣಾಂತಿಕ ವೈರಾಣುವನ್ನು ನಾಶಮಾಡುವ ಔಷಧಿ ನಮ್ಮ ಹತ್ತಿರ ಇಲ್ಲ. ಆದ್ದರಿಂದ ಜ್ವರ, ಕೆಮ್ಮು ಉಸಿರಾಟ ತೊಂದರೆ ಇದ್ದವರು ತಮ್ಮನ್ನು ಮನೆಯಲ್ಲಿ, ಇಲ್ಲ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿದ್ದು ಇತರರಿಗೆ ಹರುಡದಂತೆ ಎಚ್ಚರ ವಹಿಸಿಕೊಳ್ಳಬೇಕು. ಸಾಮಾನ್ಯ ನೆಗಡಿ ಎಂದು ಅಲಕ್ಷ್ಯ ಮಾಡದೆ ಪರೀಕ್ಷೆ ಮಾಡಿಸಿಕೊಳ್ಳಬೇಕು.



## ವಿವಿಧ ಜಿಲ್ಲೆಗಳಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿರುವುದು.


ದಾವಣಗೆರೆ



ಹಾಸನ


ಬೆಳಗಾವಿ


ಹಾವೇರಿ


ಬೆಂಗಳೂರು ಉತ್ತರ


ದಕ್ಷಿಣ ಕನ್ನಡ


ತುಮಕೂರು


ಯಾದಗಿರಿ

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)




If not delivered, please return to :
**THE EDITOR, Karnataka Scout & Guide**
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26